# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 28 • ನೋಂದಣಿ ನಂ.:KARKAN27911 • ವಿಜಯನಗರ • 23.07.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 28 • Reg.No:KARKAN27911 • VIJAYANAGARA • 23.07.2024 • Tuesday • Page:04 • Rs:2




ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು


ಪುಟ: 4ರಲ್ಲಿ ನೋಡಿ


ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
HAMPI TIMES VIJAYANAGARA
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com


## ಮೈಕ್ರೋ ನ್ಯೂಸ್

### ಗುರುಪೂರ್ಣಿಮ ಶ್ರೀಸಾಯಿ ಬಾಬಾ ವಿಶೇಷ ಪೂಜೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಗುರುಪೂರ್ಣಿಮೆಯ ನಿಮಿತ್ತ ಪಟ್ಟಣದ ಅರಳಿಹಳ್ಳಿ ಕುರದಗಡ್ಡಿಯ ಶ್ರೀಸಾಯಿಬಾಬಾ ಮಂದಿರದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಪುನಸ್ಕಾರಗಳು ಭಾನುವಾರ ಜರುಗಿದವು. ವಿವಿಧ ಹೂಗಳ ಅಲಂಕಾರದೊಂದಿಗೆ ಸಾಯಿಬಾಬಾ ಅವರನ್ನು ಸಿಂಗರಿಸಲಾಗಿತ್ತು. ಸಾಮೂಹಿಕ ಸಾಯಿಬಾಬಾ ಭಜನೆಯನ್ನು ಏರ್ಪಡಿಸಲಾಗಿತ್ತು. ಗುರುಪೂರ್ಣಿಮ ಹಿನ್ನೆಲೆಯಲ್ಲಿ ಎಂದಿನಂತೆಗೂ ವಿಶೇಷವಾಗಿ ಇಂದು ಸಾಲುಗಟ್ಟಿ ನಿಂತ ಭಕ್ತರು ಬಾಬಾರ ದರ್ಶನ ಮಾಡಿ ಕೃಪಾಕಟಾಕ್ಷಕ್ಕೆ ಪಾತ್ರರಾದರು. ಶ್ರೀಸಾಯಿಬಾಬಾರಿಗೆ ಬೆಳಗಿನ 5 ಗಂಟೆಯಲ್ಲಿ ಕಾಕಡಾರತಿ ಮಾಡುವ ಮೂಲಕ ಸುಪ್ರಭಾತ ಹಾಡಲಯಿತು. ಮದ್ಯಾಹ್ನ ಆರತಿ ನಂತರ ಸಾಯಿಬಾಬಾರವರ ಮೆರವಣಿ ಗೆಯ ಕಾರ್ಯಕ್ರಮ ವಿಜೃಂಬಣೆ ಯಿಂದ ಜರುಗು ವುದು, ಆಗಮಿಸಿದ ಭಕ್ತಾದಿಗಳಿಗೆಲ್ಲಾ ದಾಸೋಹ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಶ್ರೀಶಿರಡಿ ಸಾಯಿ ಬಾಬಾ ಸೇವಾ ಶ್ರಮದ ಅಧ್ಯಕ್ಷಮೋಹನ್ ಕುಮಾರ್ ಶ್ರೇಷ್ಠಿಯವರು ತಿಳಿಸಿದರು.

### ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ


**ಹಂಪಿ ಟೈಮ್ಸ್ ಬಳ್ಳಾರಿ**
ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಡಿ ನೀಡಲು ಉದ್ದೇಶಿಸಲಾಗಿರುವ "ಜಿಲ್ಲಾ ಅತ್ಯುತ್ತಮ ಶಿಕ್ಷಕ" ಪ್ರಶಸ್ತಿಗೆ ಅರ್ಹ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಆಡಳಿತ ಉಪ ನಿರ್ದೇಶಕರಾದ ಉಮಾದೇವಿ ತಿಳಿಸಿದ್ದಾರೆ. ಆಸಕ್ತ ಅರ್ಹ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು ಜು.30 ರೊಳಗಾಗಿ ಅರ್ಜಿ ಸಲ್ಲಿಸಬಹುದು.

### ರೈತ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದ ಶೇ.6ರಷ್ಟು ಸಹಾಯಧನ

**ಹಂಪಿ ಟೈಮ್ಸ್ ಕೊಪ್ಪಳ**
ರೈತ ಮಹಿಳೆಯರಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಹಸು, ಎಮ್ಮೆ ಖರೀದಿಗೆ ಪಡೆಯುವ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಮಹಿಳೆಯರಿಗೆರಾಜ್ಯ ಸರ್ಕಾರದಿಂದ ಶೇ.6 ರಷ್ಟು ಸಹಾಯ ಧನ ನೀಡುವ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ. 2024-25ನೇಸಾಲಿನಲ್ಲಿ ರಾಷ್ಟ್ರೀಕೃತ ಗ್ರಾಮೀಣ ಹಾಗೂ ಸಹಕಾರ ಬ್ಯಾಂಕ್‌ಗಳಿಂದ ಹೈನುಗಾರಿಕೆಗಾಗಿ ನಿಡಲಾದ ಗರಿಷ್ಠ ರೂ.65 ಸಾವಿರ ಸಾಲಕ್ಕೆ ಶೇ.6ರಷ್ಟು ವಾರ್ಷಿಕ ಬಡ್ಡಿ ಗರಿಷ್ಠ ರೂ.3625 ಸಹಾಯಧನವನ್ನು ಆಯ್ಕೆಯಾದ ಪ್ರತಿ ಫಲಾನುಭವಿಗಳಿಗೆ ನೀಡಲಾಗುತ್ತಿದ್ದು, ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಎಲ್ಲಾ ರೈತ ಮಹಿಳೆಯರು ಜಿಲ್ಲೆಯ ಆಯಾ ತಾಲ್ಲೂಕುಗಳ ಮುಖ್ಯ ಪಶು ವೈದ್ಯಾಧಿಕಾರಿಗಳು ಅಥವಾ ಪಶು ಆಸ್ಪತ್ರೆಗೆ ಸಂಪರ್ಕಿಸಿ ಯೋಜನೆಯ ಸದುಪಯೋಗ ಪಡೆದುಕೊಳ್ಳಿ.ಬೇಕು ಎಂದು ಪಶುಪಾಲನಾ ಉಪನಿರ್ದೇಶಕ ಡಾ ಪಿ.ಎಂ ಮಲ್ಲಯ್ಯ ತಿಳಿಸಿದ್ದಾರೆ.

# ತುಂಗಭದ್ರಾ ಡ್ಯಾಂ ಭರ್ತಿಗೆ 5 ಅಡಿ ಬಾಕಿ

## 87 ಟಿಎಂಸಿ ನೀರು ಸಂಗ್ರಹ । 3 ಕ್ರಸ್ಟ್‌ಗೇಟ್‌ಗಳಿಂದ 7744 ಕ್ಯುಸೆಕ್ ನೀರು ನದಿಗೆ
## ಯಾವುದೇ ಕ್ಷಣದಲ್ಲಿ ಹೆಚ್ಚುವರಿ ನೀರು ನದಿಗೆ ಬಿಡುಗಡೆ ಸಾಧ್ಯತೆ । ಜನರಿಗೆ ಎಚ್ಚರಿಕೆ
## ಜಲಾಶಯದ ನೀರಿನ ಮಟ್ಟ 1628.09 ಅಡಿ । ಡ್ಯಾಂ ಗರಿಷ್ಠ ಮಟ್ಟ 1633 ಅಡಿ





**ಹಂಪಿ ಟೈಮ್ಸ್ ಹೊಸಪೇಟೆ**
ತುಂಗಭದ್ರ ಜಲಾನಯನ ಅಚ್ಚುಕಟ್ಟು ಪ್ರದೇಶದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನಿರೀಕ್ಷೆಗೂ ಮುನ್ನ ತುಂಗಭದ್ರಾ ಜಲಾಶಯ ಭರ್ತಿಯಾಗುತ್ತಿರುವುದು ರೈತರಲ್ಲಿ ಸಂಭ್ರಮ ಮನೆಮಾಡಿದೆ.

ತುಂಗಭದ್ರಾ ಜಲಾಶಯದ ನೀರಿನ ಮಟ್ಟ 1628ಕ್ಕೆ ತಲುಪಿದೆ. 1 ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಹರಿದು ಬರುತ್ತಿರುವುದರಿಂದ ಟಿಬಿ ಬೋರ್ಡ್ ಅಧಿಕಾರಿಗಳು ನದಿಪಾತ್ರದ ಜನತೆಗೆ ನದಿತೀರಕ್ಕೆ ಜನರು ಬರದಂತೆ ಮುನ್ನೆಚ್ಚರಿಕೆ ನೀಡಿದ್ದಾರೆ. ನದಿಗೆ ಯಾವುದೇ ಕ್ಷಣದಲ್ಲಿ 50 ಸಾವಿರ ಕ್ಯುಸೆಕ್‌ವರೆಗೂ ನೀರು ಬಿಡಬಹುದಾಗಿದೆ. ಒಳಹರಿವಿನ ಪ್ರಮಾಣ ಆಧರಿಸಿ ಹೆಚ್ಚುವರಿ ನೀರನ್ನು ನದಿಗೆ ಬಿಡಲಾಗುವುದು ಎಂದು ತಿಳಿಸಿದ್ದಾರೆ.


ಸೋಮವಾರ ಬೆಳಿಗ್ಗೆ ತುಂಗಭದ್ರ ಮಂಡಳಿಯ ಮುಖ್ಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ಕ್ರಸ್ಟ್‌ಗೇಟ್‌ಗೆ ಪೂಜೆ ಸಲ್ಲಿಸಿ ತುಂಗಭದ್ರಾ ಬಲದಂಡೆಯ ಮೇಲ್ಮಟ್ಟದ ಕಾಲುವೆಗೆ ಬಟನ್ ಒತ್ತುವ ಮೂಲಕ ನೀರು ಹರಿಬಿಟ್ಟರು. ಸಂಜೆ 5ಗಂಟೆ ನದಿಗೆ ಮೂರು ಕ್ರಸ್ಟ್‌ಗೇಟ್‌ಗಳನ್ನು ಒಂದು ಅಡಿ ಎತ್ತರಿಸಿ 7744 ಕ್ಯುಸೆಕ್ ನೀರನ್ನು ನದಿಗೆ ಹರಿಬಿಟ್ಟರು. ರಾತ್ರಿ 9ಕ್ಕೆ ಜಲಾಶಯದ ನೀರಿನ ಒಳಹರಿವು 93,698 ಕ್ಯುಸೆಕ್ ಇತ್ತು. ನದಿ ಮತ್ತು ಕಾಲುವೆಗೆ ಸೇರಿ ಒಟ್ಟು 13365 ಕ್ಯುಸೆಕ್ ನೀರು ಬಿಡಲಾಗಿದೆ. ನದಿಪಾತ್ರದಲ್ಲಿ ಜಾನುವಾರುಗಳು ಬಿಡದಂತೆ ರೈತರು ಎಚ್ಚರಿಕೆವಹಿಸಬೇಕು.

ತುಂಗಭದ್ರ ಮಂಡಳಿಯ ಸುಪ್ರಿಂಟೆಂಡೆಂಟ್ ಇಂಜಿನಿಯರ್ ಶ್ರೀಕಾಂತ್‌ರೆಡ್ಡಿ, ಎಕ್ಸಿಕ್ಯೂಟಿ ಇಂಜಿನಿಯರ್ ರವಿಚಂದ್ರ, ಸಬ್ ಡಿವಿಜನ್ ಅಧಿಕಾರಿಗಳಾದ ಗೋಪಿ ಹಾಗೂ ಗಣೇಶ್ ಮತ್ತು ಕೃಷ್ಣಮೂರ್ತಿ ಮತ್ತು ಸೆಕ್ಷನ್ ಆಫೀಸರ್ ರಾಘವೇಂದ್ರ ಇವರೆಲ್ಲರೊಂದಿಗೂ ತುಂಗಭದ್ರ ರೈತ ಸಂಘದ ಅಧ್ಯಕ್ಷ ಜಿ.ಪುರುಷೋತ್ತಮ ಗೌಡ ಹಾಗೂ ಮುಖಂಡರು ಪೂಜೆಯಲ್ಲಿ ಭಾಗವಹಿಸಿದ್ದರು.



# ವಿದ್ಯಾರ್ಥಿಗಳ ಕಲಿಕಾ ಬದಲಾವಣೆಗೆ ಶಿಕ್ಷಕರು ಹೆಚ್ಚು ಆದ್ಯತೆ ನೀಡಬೇಕು

## ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ ಹೇಳಿಕೆ । ವಿಷಯ ಶಿಕ್ಷಕರ ಸಭೆ



**ಹಂಪಿ ಟೈಮ್ಸ್ ಹೂವಿನಹಡಗಲಿ**
2024-25 ನೇ ಸಾಲಿನ ಹತ್ತನೇ ತರಗತಿ ವಿದ್ಯಾರ್ಥಿಗಳ ಗುಣಾತ್ಮಕ ಕಲಿಕಾ ಬದಲಾವಣೆಗೆ ಶಿಕ್ಷಕರು ಹೆಚ್ಚು ಆದ್ಯತೆ ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ ಹೇಳಿದರು.

ಪಟ್ಟಣದ ತುಂಗಭದ್ರಾ ಪ್ರೌಢಶಾಲೆಯಲ್ಲಿ ಸೋಮವಾರ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಿದ್ದ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಸಾಮಾಜ ವಿಜ್ಞಾನ ಮತ್ತು ಹಿಂದಿ ವಿಷಯ ಶಿಕ್ಷಕರ ಸಭೆಯಲ್ಲಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ಮಕ್ಕಳ ಕಲಿಕಾ ಸುಧಾರಣೆಗಾಗಿ ಮತ್ತು ಫಲಿತಾಂಶ ಉತ್ತಮೀಕರಿಸಲು ಡಿ ಎಸ್ ಇ ಆರ್ ಟಿ ನೀಡಿರುವ ಎಲ್ಲಾ ಅಂಶಗಳನ್ನು ಜಾರಿಗೆ ತರಲು ಸೂಚಿಸಿದರು.

ಸ್ಪರ್ಧೆಗಳು: ಸಮಾಜ ವಿಜ್ಞಾನದ ನಕ್ಷೆ ಬಿಡಿಸಿ ಭಾಗಗಳನ್ನು ಗುರುತಿಸುವುದು. ಬರವಣಿಗೆ ಸ್ಪರ್ಧೆ, ಪ್ರಬಂಧ ರಂಗೋಲಿ ಚರ್ಚಾ ಸ್ಪರ್ಧೆ, ರಸಪ್ರಶ್ನೆ, ಪಠ್ಯವನ್ನು ನಾಟಕ ಮೂಲಕ ಪ್ರದರ್ಶನ ಮೊದಲಾದ ವಿನೂತನ ಸ್ಪರ್ಧೆ ಆಯೋಜಿಸಿರಿ ಎಂದರು.

ವಿಶ್ಲೇಷಣೆ: ಸೇತುಬಂಧ ಘಟಕ ಪರೀಕ್ಷೆ ರೂಪಣಾತ್ಮಕ ಪರೀಕ್ಷೆಗಳ ಫಲಿತಾಂಶ ವಿಶ್ಲೇಷಿಸಿ ಕಲಿಕೆಯನ್ನು ಸಾಧಿಸಿದ ಮಕ್ಕಳಿಗೆ ಆಯಾ ವಿಷಯ ಶಿಕ್ಷಕರು ಕ್ರಿಯಾಯೋಜನೆ ತಯಾರಿಸಿಕೊಂಡು ಅನುಪಾಲಿಸಲು ತಿಳಿಸಿದರು.

ವಿಶೇಷ ತರಗತಿ: ಶಾಲಾ ಬೆಳಿಗಿನ ಹೊತ್ತು ಪ್ರಾರ್ಥನೆಗೂ ಮುನ್ನ ಗಣಿತ, ಇಂಗ್ಲಿಷ್ ವಿಜ್ಞಾನ ವಿಷಯಗಳಿಗೆ ಒತ್ತು ನೀಡಿ ವಿಶೇಷ ತರಗತಿ ತೆಗೆದುಕೊಳ್ಳುವುದು. ಬೆಳಿಗ್ಗೆ ಸ್ವಚ್ಛ ಮನಸ್ಸಿನಿಂದ ಚಂಚಲತೆ ಇಲ್ಲದೆ ಉತ್ತಮವಾಗಿ ಕಲಿಯುತ್ತಾರೆ ಎಂದು ಹೇಳಿದರು.

ದತ್ತು ಸ್ವೀಕಾರ: ಈಗಿನಿಂದಲೇ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ದತ್ತು ತೆಗೆದುಕೊಂಡು ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿ ಪರಾಮರ್ಶಿಸಿಬೇಕು ಎಂದರು.

ಗೈರು ಹಾಜರಿ: ಸತತ ಗೈರು ಹಾಜರಾದ ಮಕ್ಕಳ ಪಾಲಕರ ಮನೆ ಭೇಟಿ ನೀಡಿ ಪಾಲಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದು ಹೇಳಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ ಹನುಮಂತಪ್ಪ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಎಚ್ ಮಲ್ಲಿಕಾರ್ಜುನ, ಮುಖ್ಯ ಗುರುಗಳಾದ ಸುರೇಶ ಅಂಗಡಿ ಉಪಸ್ಥಿತರಿದ್ದರು.

ಸಮಾಜ ವಿಜ್ಞಾನ ಮತ್ತು ಹಿಂದಿ ವಿಷಯ ಶಿಕ್ಷಕರೊಂದಿಗೆ ಸಂವಾದ ನಡೆಸಿ ಮಾರ್ಗದರ್ಶನ ನೀಡಿದರು. ತಾಲೂಕಿನ ಸರ್ಕಾರಿ ಅನುದಾನಿತ ಸಮಾಜ ವಿಜ್ಞಾನ ಮತ್ತು ಹಿಂದಿ ವಿಷಯ ಶಿಕ್ಷಕರು ಭಾಗವಹಿಸಿದ್ದರು.

# ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷರಾಗಿ ಕೊಟ್ರೇಶ್ ಶೆಟ್ಟರ್ ಆಯ್ಕೆ

## ಇಂದುಮತಿ ವಿರುದ್ಧ 41ಮತಗಳ ಅಂತರದ ಗೆಲುವು



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಅ.ಭಾ.ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಯಲ್ಲಿ ತೀವ್ರ ಪೈಪೋಟಿ ಏರ್ಪಟ್ಟು, 41 ಮತಗಳ ಅಂತರದಿಂದ ವಕೀಲರಾದ ಕೊಟ್ರೇಶ್ ಶೆಟ್ಟರ್ ಆಯ್ಕೆಯಾದರು.

ಪಟ್ಟಣದ ಪತ್ರಿಬಸವೇಶ್ವರ ದೇಗುಲದ ಆವರಣದಲ್ಲಿ ಜರುಗಿದ ಅ.ಭಾ.ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಸ್ಥಾನಕ್ಕೆ ಮತದಾನ ಜರುಗಿತ್ತು. ಆಕಾಂಕ್ಷಿಗಳಾಗಿ ಕೊಟ್ರೇಶ್ ಶೆಟ್ಟರ್ ಹಾಗೂ ಪ್ರತಿಸ್ಪರ್ಧಿ ಇಂದುಮತಿ ತಿಪ್ಪೇಸ್ವಾಮಿಯವರ ನಡುವೆ ಪೈಪೋಟಿ ಏರ್ಪಟ್ಟು ತಾಲೂಕಿನಾದ್ಯಂತ ಇದ್ದ ಮತದಾರರನ್ನು ಮನವೊಲಿಸುವಲ್ಲಿ ಯಶಸ್ವಿಯಾದರು. ಭಾನುವಾರ ಮತದಾನ ಜರಿಗಿದ ಕೇಂದ್ರದಲ್ಲಿಯೇ ಸಂಜೆ ಮತ ಎಣಿಕೆ ಕಾರ್ಯ ಜರುಗಿತು. ಒಟ್ಟು 299 ಮತಗಳು ಚಲಾವಣೆಗೊಂಡು ಪುರುಷರು 249 ಮತಗಳನ್ನು ಹಾಗೂ ಮಹಿಳೆಯರು 50 ಮತಗಳನ್ನು ಒಟ್ಟು 299 ಮತಗಳು ಚಲಾಯಿಸಿದರು.

ಅದರಲ್ಲಿ ಕೊಟ್ರೇಶ್ ಶೆಟ್ಟರ್ 170 ಮತಗಳನ್ನು ಪಡೆದರೆ, ಪ್ರತಿಸ್ಪರ್ಧಿ ಇಂದುಮತಿ ತಿಪ್ಪೇಸ್ವಾಮಿ 129 ಮತಗಳನ್ನು ಪಡೆದರು. 41 ಮತಗಳ ಹಂತರದಿಂದ 5 ವರ್ಷಗಳ ಅವಧಿಗೆ ಕೊಟ್ರೇಶ್ ಶೆಟ್ಟರ್ ಅಧ್ಯಕ್ಷರಾಗಿ ಆಯ್ಕೆಯಾದರು. ಚುನಾವಣಾಧಿಕಾರಿಗಳಾಗಿ ವಾಲಿ ಶೆಟ್ಟ್ರು ಮಲ್ಲಿಕಾರ್ಜುನ, ಕೆ.ಕೊಟ್ರೇಶ್ ಹಾಗೂ ವಿ.ವಿ.ಮೆಣಸಿಗಿ ಕಾರ್ಯನಿರ್ವಹಿಸಿದರು. ಆಯ್ಕೆಯಾದ ಕೊಟ್ರೇಶ್ ಶೆಟ್ಟರ್‌ರಿಗೆ ಸಮಾಜದ ಮುಖಂಡರು ಹರ್ಷ ವ್ಯಕ್ತಪಡಿಸಿದರು.

# ವಿಜ್ಞಾನ

## ಹೂಗಳು ಏಕೆ ಸುಗಂಧವನ್ನು ಹೊಂದಿರುತ್ತವೆ?

■ ಆರ್.ಬಿ.ಗುರುಬಸವರಾಜ

ಮನೆಯ ತೋಟದಲ್ಲಿ ಅರಳಿದ್ದ ಹೂಗಳನ್ನು ಕಂಡ ವರ್ಷ ಹರ್ಷಿತಳಾದಳು. ಒಂದು ಹೂಗಳನ್ನು ಕೆನ್ನೆಗೆ ತಾಗಿಸಿಕೊಂಡು ಸಂಭ್ರಮಿಸಿದಳು. ಹಾಗೆಯೇ ಹೂವಿನ ಬಳಿ ಬಂದು ವಾಸನೆ ಗ್ರಹಿಸುವುದನ್ನು ನೋಡಿದ ತಂದೆ ಅವಳನ್ನು ತಡೆದರು. 'ವರ್ಷ, ಹೂಗಳ ವಾಸನೆ ನೋಡಬಾರದು ಮಗಳೆ' ಎಂದರು. "ಅಪ್ಪಾ ಈ ಹೂವು ನೋಡು ಅದೆಷ್ಟು ಸುಗಂಧ ಹೊಂದಿದೆ. ನನಗೆ ಹೂವಿನ ಸುಗಂಧ ಅಂದ್ರೆ ತುಂಬಾ ಇಷ್ಟ" ಅಂದಳು. 'ಹೌದು ಬಹುತೇಕ ಹೂಗಳು ಬೀರುವ ಸುಗಂಧ ಎಲ್ಲರಿಗೂ ಇಷ್ಟವಾಗುತ್ತದೆ' ಅಂದರು. "ಪಪ್ಪಾ, ಹೂಗಳು ಏಕೆ ಸುಗಂಧ ಹೊಂದಿರುತ್ತವೆ" ಎಂದು ಮರುಪ್ರಶ್ನಿಸಿದಳು. ತಂದೆ ಅವಳ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ.

ಜೇನುನೊಣಗಳು, ಚಿಟ್ಟೆಗಳು ಮತ್ತು ಪಕ್ಷಿಗಳಂತಹ ಪರಾಗಸ್ಪರ್ಶಕಗಳನ್ನು ಆಕರ್ಷಿಸುವುದು, ಇತರ ಸಸ್ಯಗಳೊಂದಿಗೆ ಸಂವಹನ ಮಾಡುವುದು ಸೇರಿದಂತೆ ವಿವಿಧ ಕಾರಣಗಳಿಗಾಗಿ



ಹೂವುಗಳು ಸುಗಂಧವನ್ನು ಹೊಂದಿರುತ್ತವೆ. ಪರಾಗ ಸ್ಪರ್ಶವು ಫಲೀಕರಣ ಮತ್ತು ಬೀಜಗಳ ಉತ್ಪಾದನೆಗೆ ಕಾರಣವಾಗುತ್ತದೆ. ಕೆಲವು ಹೂವುಗಳು ಸಸ್ಯಾಹಾರಿಗಳು ಅಥವಾ ಕೀಟಗಳನ್ನು ಹಿಮ್ಮೆಟ್ಟಿಸುವ ಪರಿಮಳವನ್ನು ಹೊಂದಿರುತ್ತವೆ.

ಉದಾಹರಣೆಗೆ ಮಾರಿ ಗೋಲ್ಡ್ ಹೂವಿನ ಪರಿಮಳವು ಕೆಲವು ಕೀಟಗಳನ್ನು ಹಿಮ್ಮೆಟ್ಟಿಸುತ್ತದೆ ಎಂದು ತಿಳಿದುಬಂದಿದೆ. ಸಸ್ಯವು ಸಸ್ಯಾಹಾರಿಗಳ ದಾಳಿಗೆ ಒಳಗಾದಾಗ, ಹತ್ತಿರದ ಸಸ್ಯಗಳಿಗೆ ಅಪಾಯದ ಬಗ್ಗೆ ಸೂಚನೆ ನೀಡಲು ಗಾಳಿಯಲ್ಲಿ ರಾಸಾಯನಿಕ ಸಂಕೇತವನ್ನು ಬಿಡುಗಡೆ ಮಾಡುತ್ತವೆ. ಈ ಸಂಕೇತವು ಹತ್ತಿರದ ಸಸ್ಯಗಳು ತಮ್ಮದೇ ಆದ ರಕ್ಷಣಾತ್ಮಕ ಸಂಯುಕ್ತಗಳನ್ನು ಉತ್ಪಾದಿಸಲು ಪ್ರಚೋದಿಸುತ್ತದೆ. ಸಸ್ಯಾಹಾರಿಗಳಿಂದ ಅವುಗಳನ್ನು ರಕ್ಷಿಸಲು ಸಹಾಯ ಮಾಡುತ್ತದೆ. ಸುಗಂಧ ಹೊಂದಿರುವ ಹೂವುಗಳನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ, ಅರೋಮಾಥೆರಪಿ ಮತ್ತು ಇತರ ಅನ್ವಯಿಕೆಗಳಲ್ಲಿ ಬಳಸಲಾಗುತ್ತದೆ.

ಹೂವುಗಳಲ್ಲಿ ಸುಗಂಧದ ಉತ್ಪಾದನೆಯು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು ಅದು ಬಾಷ್ಪಶೀಲ ಸಾವಯವ ಸಂಯುಕ್ತಗಳ ಸಂಶ್ಲೇಷಣೆ ಮತ್ತು ಬಿಡುಗಡೆಯನ್ನು ಒಳಗೊಂಡಿರುತ್ತದೆ. ಹೂವಿನ ದಳಗಳ ಮೇಲ್ಮೈಯಲ್ಲಿರುವ ಗ್ರಂಥಿಗಳ 'ಟ್ರೈಕೋಮ್‌ಗಳು' ಎಂಬ ವಿಶೇಷ ಕೋಶಗಳಿಂದ ಈ ಸಂಯುಕ್ತಗಳನ್ನು ಉತ್ಪಾದಿಸಲಾಗುತ್ತದೆ. ಈ ಸಂಯುಕ್ತಗಳಲ್ಲಿ ಟೆರ್ಪೀನ್‌ಗಳು, ಫಿನೈಲ್‌ಪ್ರೊಪನಾಯ್ಡ್‌ಗಳು ಮತ್ತು ಬೆಂಜನಾಯ್ಡ್‌ಗಳನ್ನು ಒಳಗೊಂಡಿವೆ. ಹೂವು ಅರಳಿದಾಗ ಸುಗಂಧವು ಗಾಳಿಯಲ್ಲಿ ಬಿಡುಗಡೆಯಾಗುತ್ತವೆ. ಹೂವಿನಿಂದ ಉತ್ಪತ್ತಿಯಾಗುವ ಬಾಷ್ಪಶೀಲ ಸಾವಯವ ಸಂಯುಕ್ತಗಳ ಸಂಯೋಜನೆ ಮತ್ತು ಪ್ರಮಾಣವು ಅದರ ವಿಶಿಷ್ಟ ಸುಗಂಧವನ್ನು ನಿರ್ಧರಿಸುತ್ತದೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ವೇಟ್ ಲಿಫ್ಟರ್ ಕುಂಜುರಾಣಿ ದೇವಿ

ಮಹಿಳೆಯರೆಂದರೆ ಕೇವಲ ಅಡುಗೆ ಮನೆಗೆ ಸೀಮಿತವಾದ ಕಾಲವೊಂದಿತ್ತು ಆದರೆ ಮುಂದುವರೆದ ಜಾಗತಿಕ ಭಾರತದಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನಮಾನ ನೀಡಲಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಮಹಿಳೆ ತನ್ನದೇ ಸಾಧನೆಯ ಛಾಪನ್ನು ಮೂಡಿಸುತ್ತಿದ್ದಾರೆ ಕ್ರೀಡಾ ಕ್ಷೇತ್ರವು ಇದಕ್ಕೇನು ಹೊರತಾಗಿಲ್ಲ. ದೇವಿಯವರು 1968 ರ ಮಾರ್ಚ್ 1 ರಂದು ಇಂಫಾಲ್‌ನ ಕೈರಾಂಗ್ ಮಯ್ಯೆ ಲೈಕೈಯಲ್ಲಿ ಹಿಂದೂ ಮೈತೆಯ್ ಕುಟುಂಬದಲ್ಲಿ ಜನಿಸಿದರು. ಇಂಫಾಲ್‌ನ ಸಿಂದಾಮ್ ಸಿನ್‌ಶಾಂಗ್ ರೆಸಿಡೆಂಟ್



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಹೈಸ್ಕೂಲ್‌ನಲ್ಲಿರುವಾಗಲೇ ಕ್ರೀಡೆಯಲ್ಲಿ ಆಸಕ್ತಿಯನ್ನು ಹೊಂದಿ ತರಬೇತಿ ಪಡೆಯಲು ಪ್ರಾರಂಭಿಸಿದರು. ಇಂಫಾಲ್‌ನ ಮಹಾರಾಜ ಬೋಧ ಚಂದ್ರ ಕಾಲೇಜಿನಲ್ಲಿ ಅವರು ಪದವಿ ಮುಗಿಸುವ ಹೊತ್ತಿಗೆ,ವೇಟ್‌ಲಿಫ್ಟಿಂಗ್ ಅವರ ಮೊದಲ ಆಯ್ಕೆಯಾಗಿತ್ತು.ಇವರು ಭಾರತೀಯ ಓಟಗಾರ್ತಿ ಪಿ,ಟಿ. ಉಷಾ ರವರಿಂದ ಪ್ರೇರಣೆ ಪಡೆದಿರುತ್ತಾರೆ.


**ಆಯ್ದ ಕ್ರೀಡಾ ಸಾಧನೆಗಳು:**

1.1989 ರ ಮ್ಯಾಂಚೆಸ್ಟರ್ ನಲ್ಲಿ ನಡೆದ ತನ್ನ ಚೊಚ್ಚಲ ವಿಶ್ವ ಮಹಿಳಾ ವೇಟ್ ಲಿಫ್ಟಿಂಗ್ ಚಾಂಪಿಯನ್ ಶಿಪ್‌ನಲ್ಲಿ ಮೂರು ಬೆಳ್ಳಿ ಪದಕ ಪಡೆದಿರುತ್ತಾರೆ. 2.1987ರಲ್ಲಿ ತಿರುವನಂತಪುರದಲ್ಲಿ ಎರಡು ರಾಷ್ಟ್ರೀಯ ವೇಟ್ ಲಿಫ್ಟಿಂಗ್ ದಾಖಲೆಗಳನ್ನು ಹೊಂದಿರುತ್ತಾರೆ. 3.1994ರಲ್ಲಿ ಪುಣೆಯಲ್ಲಿ ನಡೆದ ರಾಷ್ಟ್ರೀಯ ಸ್ಪರ್ಧೆಯಲ್ಲಿ 46 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. 4.1998ರಲ್ಲಿ ಮಣಿಪುರದಲ್ಲಿ ನಡೆದ ರಾಷ್ಟ್ರೀಯ ಸ್ಪರ್ಧೆಯಲ್ಲಿ 48 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ. 5.1989 ರಿಂದ 1997 ರವರೆಗೆ ಏಳು ಸತತ ವಿಶ್ವ ಮಹಿಳಾ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗಳಲ್ಲಿ ಪದಕಗಳನ್ನು ಗೆದ್ದಿದ್ದಾರೆ (ಸರಜೆವೊ,1990 ಮತ್ತು ಮೆಲ್ಬೋರ್ನ್,1993 ಹೊರತುಪಡಿಸಿ).

6.ಏಷ್ಯನ್ ಗೇಮ್ಸ್‌ನಲ್ಲಿ ಎರಡು ಬಾರಿ ಕಂಚಿನ ಪದಕ ಪಡೆದಿರುತ್ತಾರೆ (ಬೀಜಿಂಗ್, 1990 ಮತ್ತು ಹಿರೋಷಿಮಾ,1994). 7.ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ 1 ಬೆಳ್ಳಿ ಮತ್ತು 2 ಕಂಚು (ಶಾಂಘೈ, 1989) ಮತ್ತು 1991 ರಲ್ಲಿ ಇಂಡೋನೇಷ್ಯಾದಲ್ಲಿ ನಡೆದ 44–ಕೆಜಿ ವಿಭಾಗದಲ್ಲಿ 3 ಬೆಳ್ಳಿ ಪದಕಗಳನ್ನು ಪಡೆದಿರುತ್ತಾರೆ. 8.1996 ರಲ್ಲಿ ಜಪಾನ್‌ನಲ್ಲಿ ನಡೆದ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ 2 ಬೆಳ್ಳಿ ಮತ್ತು 1 ಕಂಚು ಪದಕಗಳನ್ನು ಗಳಿಸಿರುತ್ತಾರೆ. 9.2006 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

**ಪ್ರಶಸ್ತಿ ಮತ್ತು ಪುರಸ್ಕಾರಗಳು:**

1.ಭಾರತ ಸರ್ಕಾರ ಇವರ ಕ್ರೀಡಾ ಸಾಧನೆಯನ್ನು ಗಮನಿಸಿ 1990 ರಲ್ಲಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ. 2.1996–1997ರಲ್ಲಿ ಲಿಯಾಂಡರ್ ಪೇಸ್ ಅವರೊಂದಿಗೆ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. 3.ಘನವೆತ್ತ ಭಾರತ ಸರ್ಕಾರ 2011 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನಾಗರಿಕ ಗೌರವದೊಂದಿಗೆ ಪಡೆದಿದ್ದಾರೆ. ಪ್ರಸ್ತುತ ಎನ್.ಕುಂಜರಾಣಿ ದೇವಿ ಅವರು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿ ಆರ್ ಪಿ



ಎಫ್) ನಲ್ಲಿ ಕೇಂದ್ರ ಕ್ರೀಡಾ ತಂಡದ 'ಕಮಾಂಡೆಂಟ್' ಮತ್ತು ನೋಡಲ್ ಅಧಿಕಾರಿ ಹುದ್ದೆಯನ್ನು ಹೊಂದಿದ್ದಾರೆ. 2014 ರ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಮತ್ತು ಅರ್ಜುನ ಪ್ರಶಸ್ತಿಯನ್ನು ಶಿಫಾರಸು ಮಾಡುವ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಗ್ಲಾಸ್ಗೋದಲ್ಲಿ ನಡೆದ ಕಾಮನ್ವೆಲ್ತ್ ಗೇಮ್ಸ್ 2014 ರ ಭಾರತೀಯ ಮಹಿಳಾ ವೇಟ್ ಲಿಫ್ಟಿಂಗ್ ತಂಡದ ತರಬೇತುದಾರರಾಗಿ ಕಾರ್ಯನಿರ್ವಹಿಸಿರುತ್ತಾರೆ.

# ಮೂರು ಬೆರಳಿನ ಮಿಂಚುಳ್ಳಿ

ಪಶ್ಚಿಮ ಘಟ್ಟಗಳು ಭಾರತದ ಪಶ್ಚಿಮ ಕರಾವಳಿಯಲ್ಲಿ ಗುಜರಾತ್‌ನಿಂದ ಕೇರಳದವರೆಗೆ ಸಾಗುವ ಪರ್ವತ ಶ್ರೇಣಿಯಾಗಿವೆ. ಅವು ಪ್ರಪಂಚದ ಜೀವವೈವಿಧ್ಯದ ಅತ್ಯಂತ ಪ್ರಮುಖವಾದ ತಾಣಗಳಲ್ಲಿ ಒಂದಾಗಿವೆ, ಅಪರೂಪದ ಬೇರೆಲ್ಲೂ ಸಿಗದ ಅತ್ಯಂತ ವಿಶಿಷ್ಟ ಬಗೆಯ ಸಸ್ಯಗಳು ಮತ್ತು ಪ್ರಾಣಿಗಳಿಗೆ ಮತ್ತು ಅಸಂಖ್ಯಾತ ಜೀವಸಂಕುಲಗಳಿಗೆ ಜೀವ ವೈವಿಧ್ಯತೆಯ ಅನನ್ಯ ನೆಲೆಬೀಡಾಗಿವೆ.

ಮಳೆಗಾಲ, ಅಥವಾ ಮಾನ್ಸೂನ್, ಪಶ್ಚಿಮ ಘಟ್ಟಗಳಿಗೆ ಭೇಟಿ ನೀಡಲು ವಿಶೇಷ ಸಮಯ, ಏಕೆಂದರೆ ಭೂದೃಶ್ಯವು ಹಚ್ಚ ಹಸಿರಿನ ಸ್ವರ್ಗವಾಗಿ, ನೆರೆ ತೊರೆಗಳಿಂದ ಜಲಪಾತಗಳೆಲ್ಲ ಮೈದುಂಬಿ ಹರಿಯುತ್ತ, ಮುಸುಕಿದ ಮಂಜಿನ ಆಹ್ಲಾದಕರ ವಾತಾವರಣವು ಸ್ವರ್ಗವೇ ಧರೆಗೆ ಇಳಿದಂತೆ ಬಾಸವಾಗುವ ವಾತಾವರಣ ಸೃಷ್ಟಿಸಿ ಪ್ರಕೃತಿ ಮಾತೆಯು ರೂಪಾಂತರಗೊಳ್ಳುತ್ತದೆ.

ಮಳೆಗಾಲವು ಅಸಂಖ್ಯಾತ ಜೀವರಾಶಿಗಳಿಗೆ ಜೀವ ಚೈತನ್ಯ ಮತ್ತು ಜೀವ ಕಳೆ ತುಂಬುತ್ತದೆ.. ಈ ರೀತಿಯಲ್ಲಿ ಮನ್ಸೂನ್ ಪ್ರಾರಂಭವಾದಂತೆ ಜೀವನ ಉತ್ಸಾಹ ತುಂಬಿ ಕೊಳ್ಳುವ ಮಳೆಕಾಡುಗಳ ಭವ್ಯ ಆಭರಣದ ಹಕ್ಕಿಯಾದ ಕಾಮನ ಬಿಲ್ಲಿನ ವರ್ಣಗಳೆಲ್ಲ ತನ್ನ ಮೈದುಂಬಿ ಕೊಂಡು ಅತ್ಯಾಕರ್ಷಕವಾದ ಹಾಗೂ ತನ್ನ ಬೆರಗುಗೊಳಿಸುವ ವರ್ಣಮಯವಾದ ಮೂರು ಬೆರಳಿನ ಮಿಂಚುಳ್ಳಿ ಪಕ್ಷಿಯ (oriental dwarf kingfisher )ವೀಕ್ಷಣೆಗೆ ನಾನು ನನ್ನ ಸ್ನೇಹಿತರ ಜೊತೆಗೆ ಮಹಾರಾಷ್ಟ್ರದ ಬಾಂಧ ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶದಲ್ಲಿ ಈ ಪಕ್ಷಿ ವೀಕ್ಷಣೆಗೆ ತೆರಳಿ ಅಲ್ಲಿನ ಸ್ಥಳೀಯ ಮಾರ್ಗದರ್ಶಕರ ಸಹಾಯದಿಂದ



ನಾಗರಾಜ ಕಂಬಾಳಿ ಮಠ
ವಲಯ ಅರಣ್ಯಾಧಿಕಾರಿ ಹೊಸಪೇಟೆ

Hampi Times E-paper
SCAN AND READ

ಆ ಪಕ್ಷಿ ಕಂಡು ದಿನವಿಡೀ ಪಕ್ಷಿಗಳ ಗೂಡಿನ ಸಮೀಪವೇ ಅವುಗಳಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಮರೆಮಾಚಿ ನಿರ್ಮಿಸಿದ ತಾಣಗಳಲ್ಲಿ ಅಡಗಿ ಕುಳಿತು ಪೋಷಕ ಪಕ್ಷಿಗಳು ತಮ್ಮ ಮರಿ ಹಕ್ಕಿಗಳಿಗೆ ವಿಧವಿದವಾದ ತಮ್ಮ ಆಹಾರ ವನ್ನು ತರುವ













ಛಾಯಾ ಚಿತ್ರಗಳ ಸೆರೆಹಿಡಿದ ಅನುಭವ ಅತ್ಯಂತ ವಿಶಿಷ್ಟಮಯವಾಗಿತ್ತು.. ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳಲ್ಲಿ ಮತ್ತು ನೈರುತ್ಯ ಭಾರತದ ಭಾಗಗಳಲ್ಲಿನ ಸ್ಥಳೀಯ ಪಕ್ಷಿಯಾದ ಮೂರು ಬೆರಳಿನ ಮಿಂಚುಳ್ಳಿ ಪಕ್ಷಿಯ ಭಾರತದಲ್ಲಿ ಕಾಣಸಿಗುವ ಒಟ್ಟು 12 ವಿಧದ ಮಿಂಚುಳ್ಳಿ ಗಳಲ್ಲಿಯೇ ಅತ್ಯಂತ ಚಿಕ್ಕ ಗಾತ್ರ ಹೊಂದಿದೆ.. ಅಂದರೆ ಕೇವಲ 12 ರಿಂದ 15 ಸೆಂಟಿ ಮೀಟರ್ ಉದ್ದದ ಮತ್ತು 14 ರಿಂದ 15 ಗ್ರಾಂ ತನ್ನ ದೇಹದ ತೂಕ ಇರುತ್ತದೆ..

ತನ್ನ ಕಡು ನೀಲಿ ಬಣ್ಣದ ರೆಕ್ಕೆ, ಕಿತ್ತಳೆ ಮತ್ತು ಹವಳ ವರ್ಣದ ಕೆಂಪಿನ ಚೂಪನೆಯ ಭರ್ಚಿ ಯಂತಿರುವ ಉದ್ದನೆಯ ಕೊಕ್ಕು ತನ್ನ ದೇಹದ ತುಂಬಾ ಕಾಮನಬಿಲ್ಲಿನ ಬಣ್ಣಗಳನ್ನು ಹೊಂದಿದೆ.. ನೈರುತ್ಯ ಮುಂಗಾರುಮಳೆ ಪ್ರಾರಂಭ ವಾದ ಕೂಡಲೇ ಈ ಹಕ್ಕಿಗಳು ತಮ್ಮ ಸಂತಾನವನ್ನು ಬೆಳೆಸುವ ಪ್ರಕ್ರಿಯೆಗೆ ಉತ್ಸಾಹವನ್ನು ತೋರುತ್ತಾ ಗಂಡು ಮತ್ತು ಹೆಣ್ಣು ಜೋಡಿ ಹಕ್ಕಿ ಗಳು ಸಿದ್ದ ಗೊಳ್ಳುತ್ತವೆ. ಗಂಡು ಹಕ್ಕಿ ಹೆಣ್ಣು ಹಕ್ಕಿ ಯನ್ನು ಒಲಿಸಿಕೊಳ್ಳಲು ತರ ತರ ವಾದ ಆಹಾರವನ್ನು ತಂದು ಹೆಣ್ಣು ಹಕ್ಕಿಗೆ ನೀಡುತ್ತದೆ..

ಆಹಾರದ ಲಭ್ಯವಿರುವ ಮತ್ತು ನೀರು ಹರಿಯುವ ಸ್ಥಳ ಗಳ ಸಮೀಪ ದಲ್ಲಿ ನೆಲ 1 ಮೀಟರ್ ವರೆಗೆ ಕೊರೆದು ಬಿಲದ ಗೂಡನ್ನು ನಿರ್ಮಿಸಿ 4–5 ಮೊಟ್ಟೆ ಗಳನ್ನಿಟ್ಟು ಗಂಡು ಮತ್ತು ಹೆಣ್ಣು ಹಕ್ಕಿಗಳೆರಡು ಕಾವಲು ಕಾಯುತ್ತಾ 15 ದಿನಗಳ ವರಗೆ ಕಾವು ಕೊಟ್ಟು ಮಾರಿಮಡುತ್ತವೆ...ನಂತರ ಮರಿಗಳಿಗ ಆಹಾರ ಒದಗಿಸುವ ಕಾರ್ಯವನ್ನು ನಿರಂತರವಾಗಿ ಗಂಡು ಮತ್ತು ಹೆಣ್ಣು ಹಕ್ಕಿ ಗಳೆರಡು ದಣಿವಿಲ್ಲದೆ ಪೋಷಕತ್ವದ ತಮ್ಮ ಹೊಣೆಗಾರಿಕೆಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುತ್ತವೆ.. ಮೊದ ಮೊದಲು ಮರಿಗಳಿಗೆ ಸಣ್ಣ ಸಣ್ಣ ಕೀಟಗಳು ಜೇಡ, ಮಿಡತೆಗಳನ್ನು ತಂದು ತಿನಿಸುತ್ತವೆ. ಮತ್ತು ಮರಿಗಳಿಗೆ ದಿನಕಳೆದಂತೆ ಓತಿಗಳು ಹಾವುರಾಣಿ ಕಪ್ಪೆ ಮೀನು ಗಳು ಹಾಗೂ ಏಡಿಗಳನ್ನು ಆಹಾರವಾಗಿ ತಂದು ತಿನಿಸುತ್ತವೆ.. ಈ ಪ್ರಕ್ರಿಯೆಯು ನಿರಂತರವಾಗಿ 15–20ದಿನಗಳು ನಡೆಸಿ ನಂತರ ಮರಿಗಳು ಗೂಡಿ ನಿಂದ ಹೊರ ಬರಲು ಪ್ರೇರೇಪಿಸುತ್ತವೆ.. ಗೂಡಿನಿಂದ ಹೊರ ಬಂದ ಹಕ್ಕಿಗಳಿಗೆಕೆಲ ದಿನಗಳ ವರೆಗೆ ಆಹಾರ ತಂದು ತಿನಿಸಿ ಹೊರ ಜಗತ್ತಿನ ಜೀವನದ ಪಾಠವನ್ನು ತರಬೇತಿ ನೀಡುತ್ತವೆ.. ತಂದೆ ತಾಯಿ ಗರಡಿ ಯಲ್ಲಿ ಪಳಗಿದ ನಂತರ ಮರಿ ಹಕ್ಕಿ ಗಳನ್ನು ಪೋಷಕ ಹಕ್ಕಿಗಳು ಪ್ರಕೃತಿ ಮಾತೆಯ ಮಡಿಲಿಗೆ ಹಾಕುತ್ತವೆ. ಮರಿಹಕ್ಕಿಗಳು ತಮ್ಮ ಬದುಕಿಗಾಗಿ ಸ್ವತಂತ್ರವಾಗಿ ತಮ್ಮ ಆಹಾರ ಹುಡುಕಿ ಜೀವಿಸ ಬೇಕಾಗುತ್ತದೆ.. ಪ್ರಕೃತಿ ನಿಯಮದಂತೆ ಎಲ್ಲಾ ಅಡೆತಡೆಗಳ ಮೆಟ್ಟಿ ನಿಂತ ಬಲಿಷ್ಠ ಮರಿ ಹಕ್ಕಿಗಳು ಮಾತ್ರ ತಮ್ಮ ಬದುಕ ಕಟ್ಟಿ ಕೊಳ್ಳಲು ಸಾಧ್ಯವಾಗುವುದು.

ಮುಂದಿನ ಮಳೆಗಾಲಕ್ಕೆ ಪೋಷಕ ಹಕ್ಕಿಗಳು ತಮ್ಮ ಸಂತಾನ ವೃದ್ಧಿಗೆ ಕಾಯುವುದು ಪ್ರಕೃತಿ ನಿಯಮ. ಈ ಪುಟ್ಟಗಾತ್ರದ ಶರವೇಗದಲ್ಲಿ ಹಾರುವ ಈ ವರ್ಣಮಯ ಹಕ್ಕಿಗಳ ಜೀವನವು ತಿಳಿದಷ್ಟು ಮುಗಿಯದ ಪ್ರಕೃತಿಯ ಸೋಜಿಗವೇ ಸರಿ...



# ಕುರುಬ ಸಮುದಾಯದ ಏಳಿಗೆಗಾಗಿ ಶ್ರಮಿಸುವೆ: ನೇಮಿರಾಜ್‌ನಾಯ್ಕ್

### ಎಸ್.ಎಸ್.ಎಲ್.ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ವಿದ್ಯಾರ್ಥಿ ಜೀವನದಲ್ಲಿ ತಪ್ಪುದಾರಿ ತುಳಿಯದಂತೆ ಜಾಗೃತರಾಗಿರಬೇಕು ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಶ್ರೀಕನಿಕಾ ಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಕುರುಬ ಸಮುದಾಯ ಹಾಗೂ ಕನಕ ನೌಕರರ ಸಂಘಗಳ ತಾಲೂಕು ಘಟಕಗಳಿಂದ ಕನಕ ಪೀಠದ ತಿಂಥಿಣಿ ಬ್ರಿಜ್ಡ್ ಸಿದ್ಧ ರಾಮಾನಂದಪುರಿ ಮಹಾಸ್ವಾಮೀಜಿ ಹಾಗೂ ನಂದಿಪುರದ ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ, ಎಸ್.ಎಸ್.ಎಲ್.ಸಿ





> ಸಮುದಾಯದಲ್ಲಿ ಕೆಲ ಅನಿಷ್ಠ ಪದ್ಧತಿಗಳನ್ನು ತಿದ್ದಿಕೊಂಡು, ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ನಡೆಸುವ ಹೊಣೆ ಪಾಲಕರದಾಗಿರುತ್ತೆ. ಆ ನಿಟ್ಟಿನಲ್ಲಿ ಪಾಲಕರು ಸಹ ಶಿಸ್ತು ಬದ್ಧತೆಯಿಂದ ಜೀವನ ನಡೆಸಬೇಕು.
>
> – ಸಿದ್ಧರಾಮಾನಂದ ಪುರಿ ಮಹಾಸ್ವಾಮೀಜಿ

ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಡೊಳ್ಳುಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. >>3

# ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಸತಿ ರಹಿತ ತೃತೀಯ ಲಿಂಗಿ ಫಲಾನುಭವಿಗಳಿಗೆ ದೇವರಾಜ ಅರಸು ವಸತಿ ಯೋಜನೆ ಅಡಿ ವಸತಿ ಸೌಲಭ್ಯ ಒದಗಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕಂಪ್ಲಿ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಆಸಕ್ತ ಅರ್ಹ ತೃತೀಯ ಲಿಂಗಿ ಫಲಾನುಭವಿಗಳು ಅರ್ಜಿ ಸಲ್ಲಿಸಲು ಆ.08 ಕೊನೆಯ ದಿನವಾಗಿರುತ್ತದೆ.


**ದಾಖಲೆಗಳು:** ಅರ್ಜಿದಾರರ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ನಿವೇಶನದ ಖಾತೆಯ ನಕಲು ಪ್ರತಿ, ಬ್ಯಾಂಕ್ ಪಾಸ್ ಪುಸ್ತಕ ನಕಲು ಪ್ರತಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಫೋಟೋ ಒದಗಿಸಬೇಕು.

ತೃತೀಯ ಲಿಂಗಿ ಅರ್ಜಿದಾರರು ಮಾತ್ರ ಅರ್ಹರಾಗಿದ್ದು, ಅವರ ಕುಟುಂಬವು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ, ಬಡತನ ರೇಖೆಗಿಂತ ಕಡಿಮೆ ಇರಬೇಕು. ಅರ್ಜಿದಾರರು ವಸತಿ ರಹಿತ, ಶೂನ್ಯ ಕೋಣೆ, ಒಂದು ಕೋಣೆ, ಎರಡು ಕೋಣೆಯೊಂದಿಗೆ ಕಚ್ಚಾ ಗೋಡೆ ಹಾಗೂ ಕಚ್ಚಾ ಛಾವಣಿ ಹೊಂದಿದವರು ಸಹ ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು ಅಥವಾ ಕುಟುಂಬದ ಸದಸ್ಯರ ಹೆಸರಿನಲ್ಲಿ ಯಾವುದೇ ಭಾಗದಲ್ಲಿ ಸ್ವಂತ ಮನೆ ಹೊಂದಿರಬಾರದು. ಬದಲಾಗಿ ಶಿಥಿಲಗೊಂಡ ಮನೆ, ಗುಡಿಸಲು, ಖಾಲಿ ನಿವೇಶನದಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ಕಂಪ್ಲಿ ಪುರಸಭೆ ಕಾರ್ಯಾಲಯದ ಆಶ್ರಯ ಶಾಖೆಯನ್ನು ಸಂಪರ್ಕಿಸಿ.

## ಕವಿ ಮನಸು

### ಆರಾಧನೆ





ಅನುದಿನ ಗುರುಗಳ ನೆನೆಯುತ ಮಾಡುವೆ
ಮನದಲಿ ಭಕ್ತಿಯ ಆಲಾಪನೆ
ಜನುಮವು ಸಾರ್ಥಕವೆನಿಸಿಹುದೀದಿನ
ಕನಸಲಿ ಮಾಡಿದೆ ಆರಾಧನೆ

ಬಂದೆನು ಕರುಣೆಯ ಹೊಂದುವ ಮನದಲಿ
ನಿಂದೆನು ಚರಣದಿ ಭಕ್ತಿಯಲಿ
ನೊಂದಿಹ ಬಾಳಿನ ಕುಂದನು ಅಳಿಸುತ
ಚಂದದ ಬದುಕನು ಕರುಣಿಸಲಿ

ಶರಧಿಯ ಅಲೆಗಳ ತರದಲಿ ಪೂಜ್ಯರು
ಕರುಣೆಯ ಕಿರಣವ ಬೀರಿದರು
ಶಿರದಲಿ ಕರವನು ಇರಿಸುತ ಗುರುಗಳು
ಹರಸುತ ಒಲವನು ತೋರಿದರು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ವೇದಿಕೆ



ಅಂಥಿಂಥ ವೇದಿಕೆ ಇದು ಅಲ್ಲ
ಇದರಂಥ ವೇದಿಕೆ ಸಿಗದಲ್ಲ

ಮೆತ್ತನೆಯ ಗಾದಿ ಇದು ಅಂತೆ
ಅತ್ತಿತ್ತ ಹೊರಳಿ ನಲಿವುದಂತೆ

ಕುಣಿಯೋಕೆ ಸಂಗೀತ ಬೇಕಿಲ್ಲ
ಕುಣಿಯುತಿರೆ ಸಂತಸವು ನಮಗೆಲ್ಲ

ಮೈಕಿನ ಗೊಡವೆ ಬೇಕಿಲ್ಲ
ಮೈ ಕೈ ನೋವು ಬರದಲ್ಲ

ಗುನು ಗುನಿಸುವ ಹಾಡು ಬಾಯಲ್ಲಿ
ಕುಣಿದು ನಲಿಯುವೆವು ನಾವಿಲ್ಲಿ

ಎಷ್ಟೊಂದು ಕುಣಿಯೇ ದಣಿವಿಲ್ಲ
ವೇದಿಕೆಯ ದಾಹ ತೀರಲಿಲ್ಲ

ತಾತನಿಗೆ ಬರಲು ಮೈ ನೋವು
ಮೈ ಮೇಲೆ ಹತ್ತಿ ಕುಣಿದೇವು ನಾವು

ನಮ್ಮ ತಾತ ಕಾಳಿಂಗ ಸರ್ಪವಂತೆ
ಮರ್ದನಕೆ ನಾವು ಬೇಕಂತೆ

ಸಾಕಾಗುವವರೆಗೆ ನಮ್ಮ ಕುಣಿತ
ಹಾಯಾಗಿ ಪವಡಿಸಿದನು ನಮ್ಮ ತಾತ

– ಕೆ ಎಂ ಬಸವರಾಜ ಹೊಸಪೇಟೆ

### ಗುರು

ಹಡೆವಳು ನೋವಲಿ ಅಮ್ಮ
ಪೊರೆವಳು ಜತನದಿ ನಮ್ಮ
ದುಡಿಮೆಯಗೈವನು ತಂದೆ
ತರುವನು ನಮ್ಮನು ಮುಂದೆ

ತಾಯಿ ತಂದೆಯರೇ ನಿಜದೈವ
ಆದರೆ ಅದಕೂ ಮೀರಿದೆ ಗುರುಭಾವ
ಸಹಿಸುತ ತಪ್ಪುಗಳ ಸಹನೆಯಲಿ
ತೋರುವ ಗುರಿಯನು ಬದುಕಿನಲಿ

ಪಾಠವ ಹೇಳುತ ಮನ ಬೆಳಗುವನು
ಬದುಕುವ ಬಗೆಯನು ಮಥಿಸುವನು
ಜಗಕುಪಕಾರಿಯಾಗಿ ರೂಪಿಸುವ
ಬಂಧಿಸುವ ಬಂಧಗಳ ಸೆರೆತೆಗೆವ

ಗುರುವಿನ ಪಾತ್ರವು ಗುರುತರವು
ಅವನ ಮಹಿಮೆಯು ತರ–ತರವು
ಅನವರತವೂ ಇರಲಿ ಗುರು ಭಕ್ತಿ
ಸತ್ಯದ ಅರಿವಿಗೆ ಅದೇ ನಿಜ ಶಕ್ತಿ

– ಚೇತನ ಭಾರ್ಗವ ಬೆಂಗಳೂರು

# ಸ್ಥಳೀಯ ಪ್ರತಿಭೆಗಳ ಅನಾವರಣ ವೇದಿಕೆ ತಿಂಗಳ ಸೊಬಗು




■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ಸ್ಥಳೀಯ ಮಟ್ಟದ ಕಲಾ ಪ್ರತಿಭೆಗಳನ್ನು ಗುರುತಿಸಿ, ಅವರ ಸಾಧನೆಯ ಬೆಳೆವಣಿಗೆ ಹಾಗೂ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳ ಮೂರನೆಯ ಶನಿವಾರದಂದು ಆಯೋಜಿಸುವ 'ತಿಂಗಳ ಸೊಬಗು' ಸಾಂಸ್ಕೃತಿಕ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಂಸ್ಕೃತಿಕ ಸಮುಚ್ಚಯ ನಿರ್ವಹಣಾ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಶನಿವಾರದಂದು (ಜು.20) ನಗರದ ಡಾ.ರಾಜಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗ ಮಂದಿರದಲ್ಲಿ ಆಯೋಜಿಸಲಾದ “ತಿಂಗಳ ಸೊಬಗು” ಸಾಂಸ್ಕೃತಿಕ ಕಾರ್ಯಕ್ರಮವು ಕಲಾ ಪ್ರೇಕ್ಷಕರ ಅಸ್ವಾದನೆಗೆ ಸಾಕ್ಷಿಯಾಯಿತು.

ಮೂರು ಸಾವಿರಕ್ಕೂ ಅಧಿಕ ಜಾದು ಕಾರ್ಯಕ್ರಮ ನೀಡಿದ, ಅಂತರಾಷ್ಟ್ರೀಯ ಜಾದು ಪ್ರಶಸ್ತಿಯ ಪುರಸ್ಕೃತ, ಜಾದು ಮಾಂತ್ರಿಕ ರತ್ನ ಎಂದೇ ಪ್ರಸಿದ್ಧಿಯಾದ ಬಳ್ಳಾರಿಯ ಪ್ರಕಾಶ ಹೆಮ್ಮಾಡಿ ಅವರ ಜಾನಪದ ಜಾದುವಿನ ಕೈ ಚಳಕಕ್ಕೆ ನೆರೆದಿದ್ದ ಪ್ರೇಕ್ಷಕರು ವಿಸ್ಮಯಗೊಳ್ಳುತ್ತಾ ಚಪ್ಪಾಳೆಯ ಸುರಿಮಳೆಗೈದರು.

ಇವರಿಗೆ ತಮ್ಮ ಧರ್ಮಪತ್ನಿ ನೇತ್ರಾವತಿ ಹೆಮ್ಮಾಡಿಯವರು ಜಾದುವಿಗೆ ಸಹಕಾರ ನೀಡಿದರು.

ಇನ್ನೂ ಸಿರುಗುಪ್ಪ ತಾಲ್ಲೂಕಿನ ಧಾತ್ರಿ ರಂಗ ಸಂಸ್ಥೆಯ 'ಶ್ರೀ ಕೃಷ್ಣ ಸಂಧಾನ' ಹಾಸ್ಯ ನಾಟಕಕ್ಕೆ ಕಲಾಭಿಮಾನಿಗಳು ಮನಸ್ಸು ಬಿಚ್ಚಿ ನಕ್ಕು ನಲಿದು, ಭರಪೂರ ಮನರಂಜನೆ ಪಡೆದರು.

ಈ ಸಂಧರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಜುಬೇರ್, ಅಬಕಾರಿ ಇಲಾಖೆಯ ಉಪ ಆಯುಕ್ತ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ್ ಸೇರಿದಂತ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಕುರುಬ ಸಮುದಾಯದ ಏಳಿಗೆಗಾಗಿ ಶ್ರಮಿಸುವೆ

ಎರಡನೆ ಪುಟದಿಂದ

ಪ್ರತಿಯೊಂದು ಸಮುದಾಯದಲ್ಲಿ ಬಡವರಿದ್ದಾರೆ. ಆದರೆ, ಸರ್ಕಾರದ ಸೌಲಭ್ಯ ಗಳನ್ನು ಪಡೆಯುವ ಮೂಲಕ ಉತ್ತಮ ಹಾಗೂ ಉನ್ನತ ಶಿಕ್ಷಣವನ್ನು ನಿಮ್ಮ ಮಕ್ಕಳಿಗೆ ನೀಡಿ. ಇದಲ್ಲದೆ, ಇಂದು ಉತ್ತಮ ಸ್ಥಾನದಲ್ಲಿರುವ ಕುಟುಂಬಗಳು ಅಂದು ಕಷ್ಟಕಾಲದಲ್ಲಿಯೇ ಶಿಕ್ಷಣ ಪಡೆದವರು. ಆದ್ದರಿಂದ ನಿಮ್ಮ ಸಮುದಾ ಯದ ಏಳಿಗೆಗಾಗಿ ನೀವು ಸಹಕರಿಸಿ ಎಂದರು.

ವಿಜಯನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಕುರಿ ಶಿವಮೂರ್ತಿ ಮಾತನಾಡಿ, ಪ್ರತಿಯೊಬ್ಬರು ಉತ್ತಮ ಶಿಕ್ಷಣವನ್ನು ಪಡೆಯುವ ಮೂಲಕ, ಸ್ಥಳೀಯವಾಗಿ, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಉತ್ತಮ ಫಲಿತಾಂಶ ಪಡೆದು ಕೀರ್ತಿವಂತರಾಗಿ ಎಂದರು.

ಸಮುದಾಯದ ನಿಕಟಪೂರ್ವ ತಾಲೂಕು ಅಧ್ಯಕ್ಷ ಬುಡ್ಡಿ ಬಸವರಾಜ್ ಪ್ರಸ್ತಾವಿಕವಾಗಿ ಮಾತನಾಡಿದರು. ಇದೇ ವೇದಿಕೆಯಲ್ಲಿ 120 ವಿದ್ಯಾರ್ಥಿಗಳಿಗೆ ಗೌರವಿಸಿ ಸನ್ಮಾನಿಸಲಾಯಿತು. ಈ ವೇಳೆ ನಂದಿಪುರದ ಮಹೇಶ್ವರ ಸ್ವಾಮೀಜಿ, ತಾ.ಪಂ.ಇಒ ಪರಮೇಶ್ವರಪ್ಪ, ಬಿಸಿಯೂಟ ಜಿಲ್ಲಾ ಯೋಜನಾಧಿಕಾರಿ ಶೇಖರಪ್ಪ ಹೊರಪೇಟೆ ಮತ್ತಿತರರು ಮಾತನಾಡಿದರು.

ಸಮುದಾಯದ ತಾಲೂಕು ಅಧ್ಯಕ್ಷ ಎಂ.ಶಿವರಾಜ್, ಹೊಸಪೇಟೆ ಅಧ್ಯಕ್ಷ ಟಿ.ವಿಶ್ವನಾಥ, ಜಿಲ್ಲಾಧ್ಯಕ್ಷ ಬಿ.ತಿಮ್ಮಪ್ಪ, ಕುಲಗುರುಗಳಾದ ಕೊಟ್ರಯ್ಯ ಒಡೆಯರ್, ಕೆ.ಎಸ್.ಆರ್.ಟಿ.ಸಿ ಡಿಪೋ ವ್ಯವಸ್ಥಾಪಕರಾದ ನೀಲಪ್ಪ, ಮುಖಂಡರಾದ ಬಣಕಾರ ಗೋಣೆಪ್ಪ, ದೊಡ್ಡಬಸಪ್ಪ, ಎಚ್.ಹನುಮಜ್ಜ, ನಾಗಪ್ಪ, ಜಾತಪ್ಪ, ನಿಂಗಪ್ಪ, ಜಳಿಕಿ ಗುರುಬಸಪ್ಪ, ಎಂ.ಎಸ್.ಕಲ್ಗುಡಿ, ಭಂಡಾರಿ ಭರಮ್ಮ, ಬೀರಪ್ಪ, ಹುಡೇದ್ ಹುಲುಗಪ್ಪ, ಮುಟುಗನಹಳ್ಳಿ ಹನುಮಂತಪ್ಪ ಮತ್ತಿತರರು ಇದ್ದರು. ಶಾರದ ಮಂಜುನಾಥ ಮತ್ತು ರೇವಣಸಿದ್ದಪ್ಪ ಪ್ರಾರ್ಥಿಸಿದರು. ವಕೀಲರಾದ ಬಿ.ಎಂ.ಆಂಜನೇಯ ಹಾಗು ಶಿಕ್ಷಕ ಸಿ.ವೈ.ಮೊರ್ನಾಳ್ ನಿರ್ವಹಿಸಿದರು.

# ವಚನ ಯುಗದ ಆಧ್ಯಾತ್ಮಿಕ ಚಿಂತನೆಗಳ ರೂವಾರಿ ಶಿವಶರಣ ಹಡಪದ ಅಪ್ಪಣ್ಣ

## ವಿಶ್ವ ವಿದ್ಯಾಲಯದ ಭೌತವಿಜ್ಞಾನ ವಿಭಾಗ ಪ್ರಾಧ್ಯಾಪಕ ಪ್ರೊ.ಎಸ್.ಮಂಜುನಾಥ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಹನ್ನೆರಡನೆ ಶತಮಾನದ ವಚನ ಯುಗದ ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ಚಿಂತನೆಗಳನ್ನು ಬಿತ್ತಿದವರು ಶಿವಶರಣ ಹಡಪದ ಅಪ್ಪಣ್ಣ ಎಂದು ಕಿಷ್ಕಿಂದ ವಿಶ್ವ ವಿದ್ಯಾಲಯದ ಭೌತವಿಜ್ಞಾನ ವಿಭಾಗದ ಪ್ರಾಧ್ಯಾಪಕರು ಮತ್ತು ಡೀನ್ ಆದ ಪ್ರೊ.ಎಸ್.ಮಂಜುನಾಥ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಭಾನುವಾರ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಏರ್ಪಡಿಸಿದ್ದ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಹಡಪದ ಅಪ್ಪಣ್ಣನವರು ಪ್ರಸ್ತುತ ದಿನಮಾನಗಳ ಮನುಷ್ಯರ ಮನೋಭಾವನೆಯನ್ನು ಅಂದೇ ತಮ್ಮ ವಚನಗಳ ಮೂಲಕ ಸಾಬೀತು ಪಡಿಸಿದ್ದಾರೆ ಎಂದರು. ಹಡಪದ ಅಪ್ಪಣ್ಣ ಅವರು ಯುವ ಕವಿಗಳ ಸ್ಫೂರ್ತಿ ಆಗಿದ್ದು, ಜೀವನದ ಬಗ್ಗೆ ಅರಿವು ಮೂಡಿಸುವ ವಚನಗಳೆ ನಿದರ್ಶನವಾಗಿವೆ ಎಂದು ಹೇಳಿದರು.

ಜನಸಾಮಾನ್ಯರು ತಮ್ಮ ಜೀವನದ ತಾತ್ಪರ್ಯ ತಿಳಿದುಕೊಂಡು, ಗುರು ಹಿರಿಯರಿಗೆ ವಂದಿಸಿ, ವಿನಯದಿಂದ ಜೀವನ ನಡೆಸಬೇಕೆಂಬುದು ಶಿವಶರಣ ಹಡಪದ ಅಪ್ಪಣ್ಣನವರ ಆಶಯ ವಾಗಿತ್ತು ಎಂದು ಹೇಳಿದ ಅವರು, ಕೆಲವೊಂದು ವಚನಗಳ ಸ್ವಾರಸ್ಯವನ್ನು ವಿವರಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಜಂಗಮ ಹೊಸಳ್ಳಿಯ ಪುರವರ್ಗ ಮಠದ ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮಿಜಿ ಅವರು ಮಾತನಾಡಿ, ಶಿವಶರಣ ಅಪ್ಪಣ್ಣ ನವರು ಕಾಯ, ವಾಚ, ಮನಸ್ಸಿನಿಂದ ಭಕ್ತಿಪೂರ್ವಕವಾಗಿ ನ್ಯಾಯ ಹಾಗೂ ಧರ್ಮದ ಗೌರವ ಸಂಪಾದನೆ ಮಾಡಿದರು ಎಂದು ಹೇಳಿದರು.




ಹನ್ನೆರಡನೇ ಶತಮಾನದ ಪ್ರಸಿದ್ದ ವಚನ ಕಾರರಲ್ಲಿ ಒಬ್ಬರಾದ ಹಡಪದ ಅಪ್ಪಣ್ಣನವರು ತಮ್ಮ ವಚನ ತತ್ವಾದರ್ಶಗಳ ಮೂಲಕ ಸೂರ್ಯ ಚಂದ್ರ ಇರುವವರೆಗೂ ಅಜರಾಮರವಾಗಿರುತ್ತಾರೆ ಎಂದರು. ಜಗಜ್ಯೋತಿ ಬಸವಣ್ಣನವರ ಅನುಯಾಯಿ ಹಾಗೂ ಅವರ ಆಪ್ತ ಕಾರ್ಯ ದರ್ಶಿಯಾಗಿದ್ದ ಅಪ್ಪಣ್ಣನವರು ಸಮಾಜದಲ್ಲಿ ಸಮಾನತೆ, ಐಕ್ಯತೆ ಹಾಗೂ ಒಗ್ಗಟ್ಟಿನ ಸಾರವನ್ನು ತಮ್ಮ ವಚನಗಾಯನಗಳ ಮುಖಾಂತರ ಸಾರಿ, ಸಮಾಜ ಪರಿವರ್ತ ನೆಯಾಗುವಲ್ಲಿ ಶ್ರಮವಹಿಸಿದರು ಎಂದು ಹೇಳಿದರು.

ಶಿವಶರಣ ಹಡಪದ ಅಪ್ಪಣ್ಣನವರಂತೆ ಮನುಷ್ಯರು ಮಾನವೀಯ ಗುಣ, ನೀತಿ ಮೌಲ್ಯಗಳನ್ನು ಅಳವಡಿಸಿಕೊಂಡು ಮಾದರಿ ಜೀವನ ನಡೆಸಬೇಕು ಎಂದು ಹೇಳಿದರು.

ಈ ವೇಳೆ ಶಿವಶರಣ ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಕೆ.ವಸಂತ್‌ಕುಮಾರ್ ಅವರ ತಂಡದಿಂದವಚನಸಂಗೀತಆಯೋಜಿಸಲಾಗಿತ್ತು.

**ಮೆರವಣಿಗೆ*** ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಶಿವಶರಣ ಹಡಪದ ಅಪ್ಪಣ್ಣ ಅವರ ಭಾವಚಿತ್ರದೊಂದಿಗೆ ನಗರದ ಹೆಚ್.ಆರ್. ಗವಿಯಪ್ಪ ವೃತ್ತದಿಂದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದವರೆಗೆ ಭವ್ಯ ಮೆರವಣಿಗೆ ಜರುಗಿತು.

ಈ ಸಂಧರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಹಡಪದ ಅಪ್ಪಣ್ಣ ಸೇವಾ ಸಂಘದ ಜಿಲ್ಲಾಧ್ಯಕ್ಷ ಹೆಚ್.ರುದ್ರಪ್ಪ, ಸಮಾಜದ ಮುಖಂಡರಾದ ಸಿ.ಕೊಟ್ರೇಶ, ಹೆಚ್.ತಿಪ್ಪೇಸ್ವಾಮಿ ಸೇರಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ, ಸವಿತಾ ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಉಚಿತ ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆಯಿಂದ ಉಚಿತ ಕೌಶಲ್ಯಾಧಾರಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 18 ರಿಂದ 45 ವಯೋಮಾನದ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕರಿಗಾಗಿ ಅಗಷ್ಟ ತಿಂಗಳಿನ ಮೂರನೇ ವಾರದಲ್ಲಿ 30 ದಿನಗಳ ಪುರುಷರ ಹೊಲಿಗೆ ತರಬೇತಿ ಮತ್ತು 13 ದಿನಗಳ ಸಮಗ್ರ ಕೃಷಿ ಉದ್ಯಮಿ ತರಬೇತಿಗಳನ್ನು ನೀಡಲಾಗುತ್ತಿದ್ದು, ತರಬೇತಿ ಅವಧಿಯಲ್ಲಿ ಊಟ ಹಾಗೂ ವಸತಿಯು ಉಚಿತವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ದೂ.ಸಂ : 9980510717, 9482188780 ಗೆ ಸಂಪರ್ಕಿಸಬಹುದು.

# ಪಶುಪಾಲನಾ, ಪಶುವೈದ್ಯ ಸೇವಾ ಇಲಾಖೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸಕ್ತ ಸಾಲಿಗೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಹೈನುಗಾರಿಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಸು–ಎಮ್ಮೆ ಖರೀದಿಗೆ ಬ್ಯಾಂಕ್‌ಗಳಿಂದ ಸಹಾಯಧನ ಒದಗಿಸಲು ಅರ್ಹ ರೈತ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ವಿನೋದ್ ಕುಮಾರ್ ತಿಳಿಸಿದ್ದಾರೆ.

ಹೈನುಗಾರಿಕೆಗಾಗಿ ವಿವಿಧ ಬ್ಯಾಂಕ್‌ಗಳಲ್ಲಿ ಪ್ರತಿ ಫಲಾನುಭವಿಗಳು ಪಡೆಯುವ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ರೈತ ಮಹಿಳೆಯರಿಗೆ ಪ್ರತಿ ತ್ರೈಮಾಸಿಕವಾಗಿ ಪಾವತಿ ಮಾಡುವ ಬಡ್ಡಿ ಮೊತ್ತದಲ್ಲಿನ ಶೇ.6(ರೂ.3625) ರಾಜ್ಯ ಸರ್ಕಾರದಿಂದ ಸಹಾಯಧನ ರೂಪದಲ್ಲಿ ನೀಡುವ ಯೋಜನೆ ಜಾರಿಗೊಳಿಸಲಾಗಿದ್ದು, ವಾಣಿಜ್ಯ ಬ್ಯಾಂಕ್‌ಗಳ ಸಮನ್ವಯದೊಂದಿಗೆ ಅನುಷ್ಠಾನಗೊಳಿಸಲಾಗುವುದು.

ರಾಷ್ಟ್ರೀಕೃತ ಬ್ಯಾಂಕ್, ಗ್ರಾಮೀಣ ಬ್ಯಾಂಕ್ ಹಾಗೂ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಪಡೆಯುವ ರೈತ ಮಹಿಳೆಯರು ಯೋಜನೆಯ ಸದುಪಯೋಗ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ ಹತ್ತಿರದ ಪಶುವೈದ್ಯಕೀಯ ಸಂಸ್ಥೆ ಅಥವಾ ತಾಲೂಕು ಮಟ್ಟದ ಅಧಿಕಾರಿಗಳು ಅಥವಾ ಬಳ್ಳಾರಿ–9448233756 ಸಂಡೂರು–9108334846 ಸಿರುಗುಪ್ಪ–7892855573 ಕಂಪ್ಲಿ–9964444527 ಕುರುಗೋಡು–7892209185 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುದ್ರಣ ಮಾಧ್ಯಮಗಳು ಜನರ ವಿಶ್ವಾಸಗಳಿಸಬೇಕು

## ಶಾಸಕ ಕೆ.ನೇಮರಾಜ್ ನಾಯ್ಕ್ ಹೇಳಿಕೆ। ಸಮಾಜದಲ್ಲಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮೈಮರೆಯದಂತೆ ಎಚ್ಚರಗೊಳಿಸಿ

■ ಹಂಪಿ ಟೈಮ್ಸ್ ಕೊಟ್ಟೂರು

ಸಮಾಜದಲ್ಲಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮೈಮರೆತಾಗ ಇವುಗಳನ್ನ ಎಚ್ಚರಗೊಳ್ಳಿಸುವುದಲ್ಲದೆ, ಯುದ್ಧದ ಸಂದರ್ಭದಲ್ಲಿಯೂ, ಪ್ರಾಣ ಲಕ್ಕಿಸದೆ ಮಾಧ್ಯಮ ಮಿತ್ರರು ತಮ್ಮ ಕೆಲಸದಲ್ಲಿ ತೊಡಗಿರುತ್ತಾರೆ. ಈ ಕಾರಣ ಸಮಾಜಕ್ಕೆ ಪತ್ರಕರ್ತರ ಪಾತ್ರ ಬಹುದೊಡ್ಡದು ಎಂದು ಕ್ಷೇತ್ರದ ಶಾಸಕ ಕೆ.ನೇಮರಾಜ್ ನಾಯ್ಕ್ ಹೇಳಿದರು.

ಕೊಟ್ಟೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಭಾನುವಾರ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ, ಕಾರ್ಯಕ್ರಮದ ಕೊನೇ ಹಂತದಲ್ಲಿ ವೇದಿಕೆಗೆ ಬಂದ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಜಗದೀಶ್ ಶೆಟ್ಟರ್ ತಮ್ಮ ಅಧಿಕಾರದಲ್ಲಿ ಕೊಟ್ಟೂರನ್ನು ತಾಲೂಕ ಆಗಿ ಘೋಷಿಸಿದರು ಎಂದು ಅವರನ್ನು ಸ್ಮರಿಸಿ, ರಾಜಕೀಯ ಕ್ಷೇತ್ರದಲ್ಲಿ ನನಗೆ ಜನ್ಮ ಕೊಟ್ಟಿರುವ ಕೊಟ್ಟೂರು ತಾಲೂಕಿಗೆ, ಮೈನಿಂಗ್ ಫಂಡಿಂದ, ಮೂಲ ಸೌಕರ್ಯ ಕಲ್ಪಿಸಿ, ಅಭಿವೃದ್ಧಿ ಮಾಡುವೆ ಎಂದರು.

ಇದೇ ವೇಳೆ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಪತ್ರಕರ್ತರಿಗೆ ಖಾಲಿ ನಿವೇಶನ ನೀಡುವುದಾಗಿ ಭರವಸೆ ನೀಡಿದರು. ವಿಜಯವಾಣಿ ಪತ್ರಿಕೆ ಸಹ ಸಂಪಾದಕರು ರುದ್ರಣ್ಣ ಹರ್ತಿಕೋಟೆ, ಪತ್ರಕರ್ತರು, ಸರ್ಕಾರ ಹಾಗೂ ಆಡಳಿತ ಯಂತ್ರದಿಂದ ಅಂತರವನ್ನು ಕಾಪಾಡಿಕೊಂಡು, ಹಿಂದುಳಿದವರ, ಶೋಷಿತರ ಧ್ವನಿಯಾಗಿ ನಿಲ್ಲಬೇಕಲ್ಲದೆ, ಸದಾ ಅಭಿವೃದ್ಧಿ ವರದಿ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ಉಪನ್ಯಾಸದ ಮೂಲಕ ಸಲಹೆ ನೀಡಿದರು.



2024ರ ಕೊನೆಗೆ? ಸಾಮಾಜಿಕ ಮಾಧ್ಯಮಗಳು ಶೇ.50 ರಷ್ಟು ಜನರ ವಿಶ್ವಾಸ ಕಳೆದುಕೊಳ್ಳಲಿವೆ,ಇದು ಸಮೀಕ್ಷೆ ದೃಢಪಡಿಸಿದೆ ಮುದ್ರಣ ಮಾಧ್ಯಮಗಳು ಮಾತ್ರ ಜನರ ವಿಶ್ವಾಸ ಕಳೆದುಕೊಳ್ಳಬಾರದು ಎಂದರು

ಸಮಾಜದಲ್ಲಿ ಕೋಮುಭಾವನೆ ಧಕ್ಕೆ ತರದ ರೀತಿಯಲ್ಲಿ ಪತ್ರಕರ್ತರು ಕರ್ತವ್ಯ ನಿರ್ವಹಿಸಬೇಕು. ಪತ್ರಿಕೋದ್ಯಮದಲ್ಲಿ ಹೆಚ್ಚಿನ ಕೌಶಲ್ಯವೃದ್ಧಿಗೆ ಗ್ರಾಮೀಣ ಭಾಗದಲ್ಲಿ ಪತ್ರಿಕೋಧ್ಯಮದ ಕಾರ್ಯಗಾರಗಳು ನಡೆಯಬೇಕು ಎಂದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎಂ.ಜೆ. ಹರ್ಷವರ್ಧನ್, ರಾಜಕಾರಣಿಗಳು ಮತ್ತು ಅಧಿಕಾರಿಗಳು ಪತ್ರಕರ್ತರಿಗೆ ಮಾತ್ರ ಎದರುತ್ತಾರೆ. ಯಾವುದೇ ಮುಲಾಜಿಲ್ಲದೆ ಭ್ರಷ್ಟತೆಯನ್ನು ಬಹಿರಂಗ ಪಡಿಸಬೇಕು ಎಂದು ಹೇಳಿದರು.

ರಾಜ್ಯ ಬೀಜ ನಿಗಮದ ನಿರ್ದೇಶಕ ರಾಜೇಂದ್ರ ಪ್ರಸಾದ್, ರಾಜಕಾರಣಕ್ಕೆ ಮತ್ತು ಪತ್ರಕರ್ತರಾಗಲು ವಿದ್ಯಾರ್ಹತೆಯ ಮಾನದಂಡ ಜಾರಿಗೆ ಬಂದರೆ, ರಾಜಕಾರಣದಲ್ಲಿ ಭ್ರಷ್ಟತೆ, ಪತ್ರಿಕೋಧ್ಯಮದಲ್ಲಿ ಪಾರದರ್ಶಕತೆ ಮತ್ತು ವಸ್ತು ನಿಷ್ಟವರದಿಯನ್ನು ನಿರೀಕ್ಷೆ ಮಾಡಬಹುದು ಎಂದರು.

ಸಮಾಜ ಸೇವಕ ಮರಿಸ್ವಾಮಿ, ಒಬ್ಬ ಭ್ರಷ್ಟ ಪತ್ರಕರ್ತರ ಸಾವಿರ ಭಯೋತ್ಪಾದಕರಿಗೆ ಸಮ ಎಂದು ಅಂಬೇಡ್ಕರ ಹೇಳಿದ್ದಾರೆ. ಈ ಸಮಾಜವನ್ನು ತಿದ್ದುವ ಸರಿದಾರಿಗೆ ತರುವ ಜವಾಬ್ದಾರಿ ಪತ್ರಕರ್ತರ ಮೇಲಿದೆ ಎಂದರು.

ಜಿಲ್ಲಾ ಪಂಚಾಯಿ ಮಾಜಿ ಉಪಾಧ್ಯಕ್ಷ ಪಿ.ಎಚ್. ದೊಡ್ಡ ರಾಮಣ್ಣ ಮಾತನಾಡಿದರು. ವಿಜಯನಗರ ಜಿಲ್ಲೆ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪಿ. ಸತ್ಯನಾರಾಣ ಮಾತನಾಡಿದರು.

ವೇದಿಕೆಯಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ, ಲಕ್ಷ್ಮಣ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ವೆಂಕೋಬ ನಾಯ್ಕ ಇದ್ದರು. ಅಧ್ಯಕ್ಷತೆ ವಹಿಸಿದ್ದಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಮನಿ ಸುರೇಶ ಮಾತನಾಡಿದರು. ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಉಜ್ಜಿನಿ ರುದ್ರಪ್ಪ ಸ್ವಾಗತಿಸಿ, ನಿರೂಪಿಸಿ ವಂದಿಸಿದರು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**23–07–2024 – ಮಂಗಳವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ಆಯುಷ್ಮಾನ್ |
| ಕರಣ | : ಗರಜ |
| ಸೂರ್ಯೋದಯ | : 05:54:58 |
| ಸೂರ್ಯಾಸ್ತ | : 19:11:43 |
| ರಾಹು | : 15:53–17:32 |
| ಯಮಘಂಡ | : 09:14–10:54 |
| ಗುಳಿಕ | : 12:33–14:13 |

## ತುಂಗಭದ್ರಾ ನೀರಿನ ಮಟ್ಟ




**ಸೋಮವಾರ : 22–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.21 ಅಡಿ |
| ಒಳ ಹರಿವು | 113402 ಕ್ಯುಸೆಕ್ |
| ಹೊರ ಹರಿವು | 4798 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 83.953 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1595.88 ಅಡಿ |
| ಒಳ ಹರಿವು | 34071 ಕ್ಯುಸೆಕ್ |
| ಹೊರ ಹರಿವು | 50 ಕ್ಯುಸೆಕ್ |
| ಸಾಮರ್ಥ್ಯ | 16.649 ಟಿಎಂಸಿ |


# ನಾಳೆಯಿಂದ ಕೊಪಣ ಮೀಡಿಯಾ ಫೆಸ್ಟ್

## ಜು.24 ಕೊಪ್ಪಳ ಜಿಲ್ಲಾಧಿಕಾರಿ ನಳಿನ್ ಅತುಲ್‌ರಿಂದ ಉದ್ಘಾಟನೆ









■ ಹಂಪಿ ಟೈಮ್ಸ್ ಕೊಪ್ಪಳ

ಬಹುತ್ವ ಮೀಡಿಯಾ ಹೌಸ್, ಬಹುತ್ವ ಬಳಗ ಕೊಪ್ಪಳ ನೇತೃತ್ವದಲ್ಲಿ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಕೊಪ್ಪಳ ವಿಶ್ವವಿದ್ಯಾಲಯ, ಸಮೂಹನ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೊಪ್ಪಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಪ್ಪಳ ಹಾಗೂ ವಿವಿಧ ಕಾಲೇಜುಗಳ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಕೊಪ್ಪಳ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಿಗಾಗಿ ಕೊಪಣ ಮೀಡಿಯಾ ಫೆಸ್ಟ್ ಎನ್ನುವ ಮಾಧ್ಯಮ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದಿ.24 ಮತ್ತು 25ರಂದು ಕಾರ್ಯಕ್ರಮಗಳು ನಡೆಯಲಿವೆ. 24ರಂದು ಬೆಳ್ಳಗ್ಗೆ 11.00 ಗಂಟೆಗೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಭವನದಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳಾದ ನಳಿನ್ ಅತುಲ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಪಂ ಸಿಇಓ ರಾಹುಲ್ ರತ್ನಂ ಪಾಡೇಯ ಮತ್ತು ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ ಭಾಗವಹಿಸಲಿದ್ದಾರೆ.

ಅತಿಥಿಗಳಾಗಿ ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಕೃಷ್ಣ ಉಕ್ಕುಂದ, ಮೀಡಿಯಾ ಕ್ಲಬ್ ಅಧ್ಯಕ್ಷರಾದ ರವೀಂದ್ರ ಬಿ.ಕೆ ಹಾಗೂ ಕೊಪ್ಪಳ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಸವರಾಜ್ ಗುಡ್ಲಾನೂರರವರು ಉಪಸ್ಥಿತರಿರುವರು. ಪ್ರಾಚಾರ್ಯರಾದ ಡಾ.ಗಣಪತಿ ಲಮಾಣಿ ಅಧ್ಯಕ್ಷತೆವಹಿಸುವರು. ಮೊದಲನೇ ದಿನದಂದು ವಿದ್ಯಾರ್ಥಿಗಳಿಗೆ ಸುದ್ದಿ ನಿರೂಪಣೆ, ವರದಿಗಾರಿಕೆ, ನುಡಿಚಿತ್ರ, ಕೊಲ್ಯಾಜ್, ಫೋಟೋಗ್ರಾಫಿ, ಕ್ರೀಯಾಶೀಲ ನಟನೆ ಮತ್ತು ಕ್ವಿಜ್ ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧೆಗಳ ತೀರ್ಪುಗಾರರಾಗಿ ಜಿಲ್ಲೆಯ ಹಿರಿಯ ಪತ್ರಕರ್ತರು ಹಾಗೂ ಛಾಯಾಗ್ರಾಹಕರು, ನಿರ್ದೇಶಕರು ಭಾಗವಹಿಸಲಿದ್ದಾರೆ.

ಎರಡನೇಯ ದಿನದ ವೇದಿಕೆಯ ಕಾರ್ಯಕ್ರಮವು ನಗರದ ಬಾಲಾಜಿ ಫಂಕ್ಷನ್ ಹಾಲ್‌ನಲ್ಲಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಕೆ ರವಿ ಉದ್ಘಾಟಿಸಲಿದ್ದಾರೆ. ವಿಧ್ಯಾರ್ಥಿಗಳ ಛಾಯಚಿತ್ರ ಪ್ರದರ್ಶನವನ್ನು ಹಿರಿಯ ಪತ್ರಕರ್ತ ಜಿ.ಎನ್. ಮೋಹನ್ ರವರು, ಜಿಲ್ಲಾ ಪತ್ರಿಕೆಗಳ ಪ್ರದರ್ಶನದವನ್ನು ಕರ್ನಾಟಕ ಮಾಧ್ಯಮ ಅಕಾಡಮಿಯ ಅಧ್ಯಕ್ಷರಾದ ಆಯಿಷಾ ಖಾನಂ ಅವರು ಉದ್ಘಾಟನೆ ಮಾಡುವರು. ಕಾರ್ಯಕ್ರಮದ ದಿಕ್ಸೂಚಿ ಭಾಷಣವನ್ನು ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಧ್ಯಕ್ಷರಾದ ಶಿವಾನಂದ ತಗಡೂರವರು ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಡೊಳ್ಳಿನ್, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ತಿಮ್ಮಾರೆಡ್ಡಿ ಮೇಟಿ, ಅಳವಂಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಗವಿಸಿದ್ದಪ್ಪ ಮುತ್ತಾಳ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಾಳರವರು ಆಗಮಿಸಲಿದ್ದು, ಬಹುತ್ವ ಮೀಡಿಯಾ ಹೌಸ್‌ನ ಹೆಚ್.ವಿ. ರಾಜಾಬಕ್ಷಿ ಅಧ್ಯಕ್ಷತೆವಹಿಸಿಕೊಳ್ಳುವರು. ಎರಡು ಗೋಷ್ಠಿಗಳು ನಡೆಯಲಿದ್ದು ಮೊದಲನೆಯ ಗೋಷ್ಠಿಯಲ್ಲಿ ನವ್ಯ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಅಭಿವೃದ್ದಿ ಕಲ್ಪನೆ ಕುರಿತು ಜಿ. ಎನ್.ಮೋಹನರವರು ಮಾತನಾಡಲಿದ್ದಾರೆ. ಗೋಷ್ಠಿಯಲ್ಲಿ ಪ್ರಾಚಾರ್ಯರಾದ ಡಾ. ಜಾಜಿ ದೇವೇಂದ್ರಪ್ಪ, ಪ್ರಾಧ್ಯಾಪಕರಾದ ಡಾ.ನರಸಿಂಹ ಗುಂಜಳ್ಳಿ, ಅತಿಥಿ ಉಪನ್ಯಾಸಕರಾದ ತಾಯಪ್ಪ ಮರ್ಚಡ್, ಬಸವರಾಜ್ ಕರುಗಲ್, ಮುರಳಿ, ರಾಘವೇಂದ್ರ ಜಂಗಲಿ ಭಾಗವಹಿಸಲಿದ್ದಾರೆ.

ಎರಡನೇ ಗೋಷ್ಠಿಯಲ್ಲಿ ಎಐ ಪ್ರಸ್ತುತ ಆಯಾಮಗಳು ಕುರಿತು ಶ್ರೀಮತಿ ಆಯಿಷಾ ಖಾನುಂ ಅಧ್ಯಕ್ಷರು ಕರ್ನಾಟಕ ಮಾಧ್ಯಮ ಅಕಾಡೆಮಿ ಬೆಂಗಳೂರು ಮಾತನಾಡಲಿದ್ದಾರೆ. ಗೋಷ್ಠಿಯಲ್ಲಿ ಪ್ರಾಚಾರ್ಯರಾದ ಭಜರಂಗಬಲಿ, ಪ್ರಾಧ್ಯಾಪಕರಾದ ರಾಕೇಶ್ ತಾಳಿಕೋಟಿ, ಕರಿಗೋಳಿ, ಅತಿಥಿ ಉಪನ್ಯಾಸಕರಾದ ರಂಗನಾಥ ಕೋಳೂರು, ಲೋಕೇಶ್, ಕಲೀಮುಲ್ಲಾ ಖಾದ್ರಿ ಭಾಗವಹಿಸಲಿದ್ದಾರೆ.

ಸಂಜೆ 4:30ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭವನ್ನು ಕರ್ನಾಟಕ ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಕುಲಪತಿಗಳಾದ ಡಾ.ಬಿ.ಕೆ. ರವಿ, ಹಿರಿಯ ಪತ್ರಕರ್ತ ಜಿ.ಎನ್. ಮೋಹನ್, ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಆಯೀಷಾ ಖಾನುಂ , ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಜ್ ನ ಕಾರ್ಯನಿರ್ವಾಹಕ ಉಪಾಧ್ಯಕ್ಷ , ಮಾನವ ಸಂಪನ್ಮೂಲ & ಸಾಮಾನ್ಯ ಆಡಳಿತ ವಿಭಾಗದ ಮುಖ್ಯಸ್ಥ ಪಿ.ನಾರಾಯಣ, ವಿದ್ಯಾನಿಕೇತನ ಸಮೂಹ ಸಂಸ್ಥೆಯ ಅಧ್ಯಕ್ಷರಾದ ನೆಕ್ಕಂಟಿ ಸೂರಿಬಾಬು ಹಾಗು ಉದ್ಯಮಿ ಶ್ರೀನಿವಾಸ ಗುಪ್ತಾ, ಮಾಧ್ಯಮ ಅಕಾಡೆಮಿಯ ಸದಸ್ಯರಾದ ಕೆ.ನಿಂಗಜ್ಜ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ನ್ಯೂಸ್ ಫಸ್ಟ್ ಜಿಲ್ಲಾ ವರದಿಗಾರ ಬಹುತ್ವ ಬಳಗದ ರಾಜು ಬಿ.ಆರ್ ವಹಿಸಿಕೊಳ್ಳಲಿದ್ದಾರೆ. ಸಮಾರಂಭದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಹಾಗೂ ಸಿಂಡಿಕೇಟ್ ಸದಸ್ಯರಿಗೆ ಮತ್ತು ಸಾಧಕ ಪತ್ರಕರ್ತರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಸಂಘಟಕರಾದ ಸಿರಾಜ್ ಬಿಸರಳ್ಳಿ, ರಾಜಾಬಕ್ಷಿ ಎಚ್.ವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಪಿಂಜಾರ್, ನದಾಫ್ ನಿಗಮಕ್ಕೆ ಅನುದಾನ ಮಂಜೂರು ಮಾಡಿ



ಹೊಸಪೇಟೆಯಲ್ಲಿ ಪಿಂಜಾರ್/ನದಾಫ್ ಸಂಘದ ಜಿಲ್ಲಾ ಪದಾಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಮನವಿ ಸಲ್ಲಿಸಿದರು.

■ ಹಂಪಿ ಟೈಮ್ಸ್ ಹೊಸಪೇಟೆ/ಕೊಟ್ಟೂರು

ಪಿಂಜಾರ್, ನದಾಫ್ ಅಭಿವೃದ್ಧಿ ನಿಗಮಕ್ಕೆ ಅನುದಾನ ಮಂಜೂರು ಮಾಡಬೇಕೆಂದು ಆಗ್ರಹಿಸಿ ಸೋಮವಾರ ಪಿಂಜಾರ್, ನದಾಫ್ ಸಮುದಾಯ ಕೊಟ್ಟೂರು ತಾಲೂಕು ಘಟಕದ ಪದಾಧಿಕಾರಿಗಳು ತಾಲೂಕು ಆಡಳಿತ ಉಪ ತಹಶಿಲ್ದಾರ ಅನ್ನದಾನೇಶ್ ಪತ್ತರ ಮೂಲಕ ಸಿಎಂಗೆ ಮನವಿ ಪತ್ರ ಸಲ್ಲಿಸಿದರು. ಪಿ.ಹಿಮಾಂ ಸಾಬ್ ತಾಲೂಕು ಅಧ್ಯಕ್ಷ ಮಾತನಾಡಿ, ರಾಜ್ಯದಲ್ಲಿ ಸುಮಾರು 22 ರಿಂದ 25 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಪಿಂಜಾರ್ ಮತ್ತು ನದಾಫ್ ಸಮುದಾಯ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ಹಾಗೂ ರಾಜಕೀಯ ಸೇರಿದಂತೆ ಹಲವಾರು ರಂಗಗಳಲ್ಲಿ ಅತ್ಯಂತ ಶೋಷಿತ ವಾಗಿರುವ ಈ ಸಮಾಜದ ಅಭಿವೃದ್ಧಿಗೆ ತಮ್ಮ ಆದೇಶದಂತೆ ಅನುದಾನ ನೀಡಬೇಕೆಂದು ಒತ್ತಾಯಿಸಿದರು.

ಹಿಂದೆ ಅಲ್ಪಸಂಖ್ಯಾತ ನಿಗಮದಲ್ಲಿ ಒಟ್ಟಾಗಿದ್ದ ಸಂಧರ್ಭದಲ್ಲಿ ತಾಂತ್ರಿಕ ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿ ಪಿಂಜಾರ್, ನದಾಫ್ ಸಮುದಾಯ ಅನೇಕ ಸೌಲಭ್ಯಗಳಿಂದ ವಂಚಿತಕ್ಕಿಡಾಗಿತ್ತು,ಇದನ್ನು ಅರಿತು ಪ್ರತ್ಯೇಕ ನಿಗಮಕ್ಕೆ ಮನವಿ ಕೋರಿದಾಗ ಸರ್ಕಾರ ಸ್ಪಂದಿಸಿ ಇದತ ಜೊತೆಗೆ 13 ಜಾತಿಗಳಿಗೆ ಪ್ರತ್ಯೇಕ ನಿಗಮ ಘೋಷಿಸಿತು. ಜನಸಂಖ್ಯೆ ಆಧಾರದ ಮೇಲೆ ನೂತನ ನಿಗಮಕ್ಕೆ ಸರ್ಕಾರ ಅನುದಾನ ಬಿಡುಗಡೆ ಮಾಡುವಂತೆ ಹಲವು ಬಾರಿ ಮನವಿ ಮಾಡಿದ್ದರು ಸ್ಪಂದಿಸದೇ ನಿರ್ಲಕ್ಷ್ಯ ಧೋರಣೆ ತೋರುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಾಲಿ ಸರ್ಕಾರ ಬಡವರ ಪರ ಮತ್ತು ಸಾಮಾಜಿಕ ನ್ಯಾಯ ನೀಡುವ ಸರ್ಕಾರ, ಎಂದು ಚುನಾವಣೆ ಸಂಧರ್ಭದಲ್ಲಿ ಪ್ರಚಾರ ಮಾಡಿ ಈಗ ಶೋಷಿತ ಸಮಾಜವನ್ನು ನಿರ್ಲಕ್ಷ್ಯಸುತ್ತಿರುವುದು ಅದು ಸಮಾಜಕ್ಕೆ ಮಾಡುವ ಘೋರ ಅನ್ಯಾಯ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಕಳಕಳಿಯುಳ್ಳ ನಾಯಕರಿದ್ದು ಶೋಷಿತ ಸಮುದಾಯವನ್ನು ನಿರ್ಲಕ್ಷ್ಯಸದೆ ಶೀಘ್ರ ಪಿಂಜಾರ್, ನದಾಫ್ ನಿಗಮಕ್ಕೆ ಅನುದಾನ ನೀಡಬೇಕು ಒಂದು ವೇಳೆ ನಿರ್ಲಕ್ಷ್ಯಸಿದರೆ ರಾಜ್ಯದಾದ್ಯಂತ ಪ್ರತಿಭಟನೆ, ಧರಣಿ ಕೈಗೊಳ್ಳಬೇಕಾಗುತ್ತೆ ಎಂದು ಎಚ್ಚರಿಕೆ ನೀಡಿದರು. ಈ ಸಂಧರ್ಭದಲ್ಲಿ ಉಪಾಧ್ಯಕ್ಷ ಹಸನ್ ಸಾಬ್, ಖಾಸೀಮ್ ಸಾಬ್, ಎಂ.ದಾದಾಪಿರ್, ಆಶಾ ಬಿ ಹಸನ್ ಪೀರ್, ಪಿ.ಘನಿಸಾಬ್, ಸಲೀಂ, ಸಾಧಿಕ ಆಲಿ, ಹೊನ್ನೂರ್ ಸಾಬ್ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

# ಮೆದುಳಿನ ಆರೋಗ್ಯಕ್ಕೆ ಸಮತೋಲಿತ ಆಹಾರ, ವ್ಯಾಯಾಮ, ಯೋಗ ಅವಶ್ಯಕ

## ನ್ಯಾಯಾಧೀಶ ರಾಜೇಶ್ ಎನ್.ಹೊಸಮನಿ ಹೇಳಿಕೆ । ವಿಶ್ವ ಮೆದುಳು ದಿನಾಚರಣೆ




■ ಹಂಪಿ ಟೈಮ್ಸ್ ಬಳ್ಳಾರಿ

ಮೆದುಳು ಮಾನವ ದೇಹದ ಬಹು ಮುಖ್ಯ ಅಂಗ. ನಮ್ಮ ಭಾವನೆಗಳು, ಆಲೋಚನೆಗಳು ಮತ್ತು ಎಲ್ಲಾ ಕ್ರಿಯೆಗಳಿಗೆ ಇದು ಕಾರಣವಾಗಿದ್ದು, ಉತ್ತಮ ಸಮತೋಲಿತ ಆಹಾರ ಮತ್ತು ವ್ಯಾಯಾಮ, ಯೋಗ ಮೂಲಕ ಮೆದುಳಿನ ಆರೋಗ್ಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನಿ ಅವರು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ಮೆದುಳಿನ ಆರೋಗ್ಯ ಉಪಕ್ರಮ, ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರ ಹಾಗೂ ಜಿಲ್ಲಾಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಸೋಮವಾರ ಜಿಲ್ಲಾಸ್ಪತ್ರೆಯ ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರದಲ್ಲಿ ಏರ್ಪಡಿಸಿದ್ದ 'ವಿಶ್ವ ಮೆದುಳು ದಿನಾಚರಣೆ' ಕಾರ್ಯಕ್ರಮ ಮತ್ತು ನೂತನ ಮೆದುಳಿನ ಆರೋಗ್ಯ ಚಿಕಿತ್ಸಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದೇಹದ ಸಂಪೂರ್ಣ ಅಂಗಾಂಗಗಳಿಗೆ ಸಂದೇಶ ಹೋಗುವುದು ಮೆದುಳಿನಿಂದ. ಮೆದುಳಿನ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಆ ಕಾರಣಕ್ಕೆ ಮೆದುಳಿನ ಆರೋಗ್ಯ ಹಾಗೂ ನರ ವೈಜ್ಞಾನಿಕ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷ ವಿಶ್ವ ಮೆದುಳಿನ ದಿನವನ್ನು ಆಚರಿಸಲಾಗುತ್ತದೆ ಎಂದರು.

ಮೆದುಳಿನ ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಆದ್ಯತೆಯಾಗಬೇಕು. ಚಿಂತೆ, ಖಿನ್ನತೆ, ಒತ್ತಡ ನಿರ್ವಹಣೆಯತ್ತ ನಾವು ಹೆಚ್ಚು ಗಮನ ನೀಡಬೇಕು. ಮಾನಸಿಕ ಸ್ವಾಸ್ಥ ಕಾಪಾಡಿಕೊಂಡು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ದಾರಿ ಮಾಡಿಕೊಡಬೇಕು. ಮೆದುಳಿನ ಆರೋಗ್ಯ ಮತ್ತು ಅಸ್ವಸ್ಥತೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿಯನ್ನು ನೀಡಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯಾಧಿಕಾರಿ ಡಾ.ವೀರೇಂದ್ರ ಕುಮಾರ್.ಕೆ.ಜಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಸ್ಥಾನಿಕ ವೈದ್ಯಾಧಿಕಾರಿ ಡಾ.ವಿಶ್ವನಾಥ.ಕೆ., ಉಪಮುಖ್ಯಾಧಿಕಾರಿ ಡಾ.ಗುರುನಾಥ ಬಿ. ಚವ್ಹಾಣ್, ಜನರಲ್ ಮೆಡಿಸನ್ ವಿಭಾಗದ ಮುಖ್ಯಸ್ಥ ಡಾ.ಯೋಗಾನಂದ ರೆಡ್ಡಿ, ಮೆದುಳು ಆರೋಗ್ಯ ಚಿಕಿತ್ಸಾ ಕೇಂದ್ರದ ನರರೋಗ ತಜ್ಞ ಡಾ.ಕಮಲ್ ಕುಮಾರ್ ಜೈನ್, ನೋಡಲ್ ಅಧಿಕಾರಿ ಡಾ.ರಾಕೇಶ್ ಸೇರಿದಂತೆ ವೈದ್ಯಾಧಿಕಾರಿಗಳು, ಶುಶೂಷ್ರಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

**ಹಡಗಲಿ ಸೌಹಾರ್ದ ಪತ್ತಿನ ಸಹಕಾರಿ ನಿ.,**
ಸೊಪ್ಪಿನ ಬಾಳಪ್ಪ ಕಾಂಪ್ಲೆಕ್ಸ್ ಮಳಿಗೆ ಸಂಖ್ಯೆ : 04, ಹೂವಿನ ಹಡಗಲಿ.
ಮೇನ್ ರೋಡ್–583219, ತಾಲೂಕು ಹೂವಿನ ಹಡಗಲಿ, ಜಿಲ್ಲೆ ವಿಜಯನಗರ.

**ಪತ್ರಿಕಾ ಪ್ರಕಟಣೆ**

**2023–24ನೇ ಸಾಲಿನ ಸಾಮಾನ್ಯ ಸಭೆಯ ಸೂಚನಾ ಪತ್ರ**

ನಮ್ಮ ಸೌಹಾರ್ದ ಸಹಕಾರಿಯ ಸನ್ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ.19–08–2024ರ ಸೋಮವಾರ ಬೆಳಗ್ಗೆ: 11.00 ಗಂಟೆಗೆ, ನಮ್ಮ ಸಹಕಾರಿ ಕಚೇರಿಯಲ್ಲಿ, ಅಧ್ಯಕ್ಷರಾದ ಶ್ರೀಯುತ **ಪತ್ರೇಶ್ ಎಚ್.ಎಂ.** ಇವರ ಘನ ಅಧ್ಯಕ್ಷತೆಯಲ್ಲಿ, ಸಹಕಾರಿ ಪತ್ತಿನ ಸಂಘದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಸನ್ಮಾನ ಸದಸ್ಯರು ಸಕಾಲದಲ್ಲಿ ಹಾಜರಿದ್ದು ಕಾರ್ಯಕಲಾಪದಲ್ಲಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇವೆ.

ಸಹಿ/
ಕಾರ್ಯಕಾರಿ ಮಂಡಳಿ ಪರವಾಗಿ
(ಶ್ರೀಧರ.ಡಿ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

ದಿನಾಂಕ: 19–07–2024.
ಸ್ಥಳ: ಹೂವಿನ ಹಡಗಲಿ.

**ವಿ.ಸೂ:** 01, ಈ ಸಭೆಗೆ ಬರುವಾಗ ಈ ಪತ್ರ ತಪ್ಪದೇ ತರಬೇಕು. 02, ಸಾಮಾನ್ಯ ಸಭೆಯಲ್ಲಿ ಸಹಕಾರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು, ಸದಸ್ಯರು ಬಯಸಿದಲ್ಲಿ 7ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಬೇಕು.

**ಪ್ರಣತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.,**
ಶ್ರೀಬನಶಂಕರಿ ದೇವಸ್ಥಾನದ ಹತ್ತಿರ, ಹಂಪಸಾಗರ–2
ಮೇನ್ ರೋಡ್–583214, ತಾಲೂಕು ಹಗರಿಬೊಮ್ಮನಹಳ್ಳಿ, ಜಿಲ್ಲೆ ವಿಜಯನಗರ.

**ಪತ್ರಿಕಾ ಪ್ರಕಟಣೆ**

**2023–24ನೇ ಸಾಲಿನ ಸಾಮಾನ್ಯ ಸಭೆಯ ಸೂಚನಾ ಪತ್ರ.**

ನಮ್ಮ ಸೌಹಾರ್ದ ಸಹಕಾರಿಯ ಸನ್ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 19–08–2024ರ ಸೋಮವಾರ ಬೆಳಗ್ಗೆ:11.00 ಗಂಟೆಗೆ, ನಮ್ಮ ಸಹಕಾರಿ ಕಚೇರಿಯ ಮುಂಭಾಗದಲ್ಲಿ, ಅಧ್ಯಕ್ಷರಾದ **ಶ್ರೀಮತಿ ಎ.ಪಾಲಾಕ್ಷಮ್ಮ** ಇವರ ಘನ ಅಧ್ಯಕ್ಷತೆಯಲ್ಲಿ, ಸಹಕಾರಿ ಪತ್ತಿನ ಸಂಘದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಸನ್ಮಾನ ಸದಸ್ಯರು ಸಕಾಲದಲ್ಲಿ ಹಾಜರಿದ್ದು ಕಾರ್ಯಕಲಾಪದಲ್ಲಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದು ಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಸಹಿ/
ಕಾರ್ಯಕಾರಿ ಮಂಡಳಿ ಪರವಾಗಿ
(ಶ್ರೀಮತಿ ವಿ.ಪಿ.ಶ್ವೇತಾ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

ದಿನಾಂಕ: 19–07–2024.
ಸ್ಥಳ: ಹಂಪಸಾಗರ–2.

**ವಿ.ಸೂ:** 01, ಈ ಸಭೆಗೆ ಬರುವಾಗ ಈ ಪತ್ರ ತಪ್ಪದೇ ತರಬೇಕು. 02, ಸಾಮಾನ್ಯ ಸಭೆಯಲ್ಲಿ ಸಹಕಾರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು, ಸದಸ್ಯರು ಬಯಸಿದಲ್ಲಿ 7ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಬೇಕು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SCAN & READ E-PAPER

SSLC KANNADA Hampi Times Margadarshi

## ವಿಷಯ : ಪ್ರಥಮ ಭಾಷೆ ಕನ್ನಡ

## ಪದ್ಯ-1 ಸಂಕಲ್ಪ ಗೀತೆ

(ಮುಂದುವರೆದ ಭಾಗ)

**3) ಮತಗಳೆಲ್ಲವೂ ಪಥಗಳು ಎನ್ನುವ**
**ಹೊಸ ಎಚ್ಚರದೊಳು ಬದುಕೋಣ**
**ಭಯ ಸಂಶಯದೊಳು ಕಂದಿದ ಕಣ್ಣೋಳು**
**ನಾಳಿನ ಕನಸನು ಬಿತ್ತೋಣ.(ಜೂನ್–2024)**

ಎಲ್ಲಾ ಮತಗಳು ಧರ್ಮಗಳು ಸಾಧನೆಯ ಹಾದಿಗಳು ಎಂಬ ಎಚ್ಚರದಲ್ಲಿ ಬದುಕಬೇಕು. ನಾವು ಮತಧರ್ಮದ ಹೆಸರಿನಲ್ಲಿ ಕಲಹ ಮಾಡದೇ, ಧರ್ಮ ಗ್ರಂಥಗಳು ಸಕಲ ಜೀವರಾಶಿಗಳಿಗೆ ಸನ್ಮಾರ್ಗ ತೋರುವಂತೆ ದಾರಿ ದೀಪಗಳಾಗಿವೆ. ಅಸಮಾನತೆ, ಭಯೋತ್ಪಾದಕತೆ, ಶೋಷಣೆ, ಇತ್ಯಾದಿಗಳಿಂದ ಭಯ ಸಂಶಯಗಳಿಂದ ಮುಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೊಡ್ಡ ಸಂಕಲ್ಪವನ್ನು ಕೈಗೊಳ್ಳಬೇಕು ಈ ನಿಟ್ಟಿನಲ್ಲಿ ಪ್ರಯತ್ನಶೀಲರಾದಾಗ ಆರೋಗ್ಯ ಯುತವಾದ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ಎಂಬ ಮಾತನ್ನು ಶಿವರುದ್ರಪ್ಪನವರು ಹೇಳಿದ್ದಾರೆ.

ಮೌಲ್ಯ: ನಾವು ದೇವರು ಮತ್ತು ಧರ್ಮದ ಬಗ್ಗೆ ಕಲಹ ಮಾಡಿಕೊಳ್ಳದೇ, ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢ ನಿಷ್ಠೆಯಿಂದ ಶಾಂತಿ ಮತ್ತು ಸಮೃದ್ಧವಾದ ಭವಿಷ್ಯದ ಸಮಾಜ ನಿರ್ಮಾಣ ಮಾಡಬಹುದು.

## ವಸಂತ ಮುಖ ತೋರಲಿಲ್ಲ

## (ಪಠ್ಯ ಪೂರಕ ಅಧ್ಯಯನ)

**1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ? (ಮಾರ್ಚ್–2018)**
ಉತ್ತರ– ಪುಟ್ಟಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

**2. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ? (ಮಾರ್ಚ್–2019, ಮಾರ್ಚ್–2022, ಜುಲೈ–2021)**
ಉತ್ತರ– ಪುಟ್ಟ ಪೋರಿಯ ಅಮ್ಮ ಗುಡಿಸಿಲಿನಲ್ಲಿ ಮಲಗಿದ್ದಾಳೆ.

**3. ಯಾರಿಗೆ ವಸಂತ ಮುಖ ತೋರಲಿಲ್ಲ ? (ಜೂನ್–2019)**
ಉತ್ತರ– ಕಮ್ಮಾರನಿಗೆ , ಕುಂಬಾರನಿಗೆ , ನೇಕಾರನಿಗೆ, ಕೇರಿಯ ಮಾರನಿಗೆ ಹಾಗೂ ಪುಟ್ಟಿಗೆ ವಸಂತ ಮುಖ ತೋರಲಿಲ್ಲ.

**4. ಪುಟ್ಟಿಯ ಪ್ರಶ್ನೆಗಳೇನು ?**
ಉತ್ತರ– ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಇವು ಪುಟ್ಟಿಯ ಪ್ರಶ್ನೆಗಳಾಗಿವೆ.

**5. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ? (ಮಾರ್ಚ್–2020, ಜೂನ್–2020, ಮಾರ್ಚ್–2022, ಜೂನ್–2022, ಮಾರ್ಚ್–2023, ಮಾರ್ಚ್–2024, ಜೂನ್–2024)**
ಉತ್ತರ– ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ನಿಂತಿವೆ. ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರಡುತ್ತಿವೆ. ಕೋಗಿಲೆಗಳು ಮನದುಂಬಿ ಇಂಪಾಗಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ಮಲ್ಲಿಗೆ ಹೂವು ಮುಗುಳುನಗೆ ಬೀರಿದೆ. ಹೊಳೆಯುವರಂಗೋಲಿಯಲ್ಲಿಬಾಲರವಿಥಳಥಳಿಸುತ್ತಿದ್ದಾನೆ. ಈ ರೀತಿ "ವಸಂತ ಮುಖ ತೋರಲಿಲ್ಲ" ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

**6. ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ ಬರಲು ವಸಂತನಿಗೂ ಹೆದರಿಕೆಯಾದದ್ದು ಏಕೆ ? (ಜೂನ್ /ಸೆಪ್ಟಂಬರ್–2020 )**
ಉತ್ತರ– ಗವ್ವೆನ್ನುವ ಗುಡಿಸಿಲಿನಲ್ಲಿ ಪುಟ್ಟಿಯ ಅಮ್ಮ ಗೂರುತ್ತ ಮಲಗಿದ್ದಾಳೆ. ತೂತು ಬಿದ್ದ ಸೀರೆಯಲ್ಲಿ ಬಾಲ ರವಿ ಸೊರಗಿದ್ದಾನೆ. ಸುಣ್ಣ ಕಾಣದ ಗೋಡೆಗಳು ಮುಖ ಮುಚ್ಚಿಕೊಂಡಿವೆ. ಹೀಗೆ ಇಡೀ ಗುಡಿಸಿಲೊಳಗೆ ಕತ್ತಲೆ ಆವರಿಸಿ ಗವ್ವೆನ್ನುತ್ತಿದ್ದರಿಂದ ಒಳಗೆ ಬರಲು ವಸಂತನಿಗೂ ಹೆದರಿಕೆಯಾಯಿತು.

**7. ಮೂಕ ವಿಸ್ಮಿತಳಾದ ಪುಟ್ಟಿ ಥಳಥಳಿಸುವ ಬಾಲ ರವಿಯನ್ನು ಕಂಡಿದ್ದು ಎಲ್ಲಿ ? (ಸೆಪ್ಟಂಬರ್–2021)**
ಉತ್ತರ– ಮೂಕ ವಿಸ್ಮಿತಳಾದ ಪುಟ್ಟಿ ಥಳಥಳಿಸುವ ಬಾಲ ರವಿಯನ್ನು ಹೊಳೆವ ರಂಗೋಲಿಯಲ್ಲಿ ಕಂಡಳು.

**8. ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ ? (ಜೂನ್–2023)**
ಉತ್ತರ–ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈ ತುಂಬಿ ಬೆಳೆದು ನಿಂತಿವೆ.

ಪ್ರತಿದಿನದ ಸ್ವಲ್ಪ ಪ್ರಗತಿಯು ಭವಿಷ್ಯದಲ್ಲಿ ದೊಡ್ಡ ಫಲಿತಾಂಶವನ್ನು ನೀಡುತ್ತದೆ.

'ನಿನ್ನ ಏಳ್ಗೆಗೆ ನೀನೇ ಶಿಲ್ಪಿ'

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಮಧು.ಕೆ., ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ(ತಾ), ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA